




# ಎಸ್.ಎಸ್.ಎಲ್.ಸಿ ಗಣಿತ ವಾರ್ಷಿಕ ಪರೀಕ್ಷೆಯ ಪ್ರಶ್ನೆಗಳು & ಉತ್ತರಗಳು :

## " MATHEMATICS GIVES US HOPE THAT EVERY PROBLEM HAS A SOLUTION "

BY :

SRI. VEERENDRA H.M.

G.P.U.C. HS MEGARAVALLI, THIRTHAHALLI TQ

SMT. SHASHIPRABHA K.S.

G.H.S. ARASALU, HOSANAGARA TQ SHIMOGA.



Use E-Papers, Save Tress
Above line hide when print out

# ಅಧ್ಯಾಯ–1 : ಸಮಾಂತರ ಶ್ರೇಢಿಗಳು:

**ಸಮಾಂತರ ಶ್ರೇಢಿ :** ಮೊದಲ ಪದವನ್ನು ಹೊರತುಪಡಿಸಿ ಪ್ರತಿಯೊಂದು ಪದವನ್ನು ಪಡೆಯಲು ಅದರ ಹಿಂದಿನ ಪದಕ್ಕೆ ಒಂದು ನಿರ್ದಿಷ್ಟ ಸಂಖ್ಯೆಯನ್ನು ಕೂಡಿಸುವುದರಿಂದ ಪಡೆಯುವ ಸಂಖ್ಯಾಪಟ್ಟಿಯೇ ಸಮಾಂತರ ಶ್ರೇಢಿ.

ಆ ಸ್ಥಿರ ಸಂಖ್ಯೆಯನ್ನು ಸಾಮಾನ್ಯ ವ್ಯತ್ಯಾಸ(d) ಎನ್ನುವರು.

**ಉದಾಹರಣೆ :** 1) 1, 2, 3, 4, ....................

2) 100, 80, 60, ...............

3) –3, –2, –1, .................

4) $\frac{1}{2}, \frac{1}{2}, \frac{1}{2}, \frac{1}{2}$, .............

ಸಮಾಂತರ ಶ್ರೇಢಿಯ ಪದಗಳನ್ನು $a_1, a_2, a_3, a_4$, ............ $a_n$ ಎಂದು ಸೂಚಿಸಲಾಗುತ್ತದೆ.

ಸಾಮಾನ್ಯ ವ್ಯತ್ಯಾಸ(d) $= a_2 - a_1 = a_3 - a_2 =$ .................. $= a_n - a_{n-1} = a_{n+1} - a_n$

ಸಮಾಂತರ ಶ್ರೇಢಿಯ ಸಾಮಾನ್ಯ ರೂಪ : a, a+d, a+2d, ................., a + (n-1)d

ಒಂದು ಸಮಾಂತರ ಶ್ರೇಢಿಯ ಮೊದಲ ಪದ 'a' ಮತ್ತು ಸಾಮಾನ್ಯ ವ್ಯತ್ಯಾಸ 'd' ಆದಾಗ ಅದರ

'n' ನೇ ಪದ ಕಂಡುಹಿಡಿಯುವ ಸೂತ್ರ : $\mathbf{a_n = a + (n-1)d}$

ಕೊನೆಯಿಂದ 'n' ನೇ ಪದ $= l - (n-1)d$ [ l – ಕೊನೆಯ ಪದ ]

'n' ಪದಗಳ ಮೊತ್ತ ಕಂಡುಹಿಡಿಯುವ ಸೂತ್ರ : $S_n = \frac{n}{2}\{2a + (n-1)d\}$

'n' ಪದಗಳ ಮೊತ್ತ : $S_n = \frac{n}{2}\{a + a_n\}$ [ ಮೊದಲ ಪದ ಮತ್ತು ಕೊನೆಯ ಪದ ಕೊಟ್ಟಾಗ ]

'n' ಸ್ವಾಭಾವಿಕ ಸಂಖ್ಯೆಗಳ ಮೊತ್ತ : $\Sigma n$ or $S_n = \frac{n(n+1)}{2}$

'n' ಸಮ ಸಂಖ್ಯೆಗಳ ಮೊತ್ತ : $S_n = n(n+1)$

'n' ಬೆಸ ಸಂಖ್ಯೆಗಳ ಮೊತ್ತ : $S_n = n^2$

n ಪದಗಳ ಮೊತ್ತ ಮತ್ತು (n-1) ಪದಗಳ ಮೊತ್ತ ಕೊಟ್ಟಾಗ, $a_n = S_n - S_{n-1}$

**ಸಮಾಂತರ ಮಾಧ್ಯ :** a, b ಮತ್ತು c ಗಳು ಸಮಾಂತರ ಶ್ರೇಢಿಯಲ್ಲಿದ್ದಾಗ, $b = \frac{a+c}{2}$

## ಬಹು ಆಯ್ಕೆ ಪ್ರಶ್ನೆಗಳು :

1) ಈ ಕೆಳಗಿನವುಗಳಲ್ಲಿ ಯಾವುದು ಸಮಾಂತರ ಶ್ರೇಢಿಯಾಗಿದೆ ? July : 2021

A) 1, -1, -2, ......... B) 1, 5, 9, .........
C) 2, -2, 2, -2, ......... D) 1, 2, 4, 8, ...........

2) 8, 5, 2, –1, .......... ಈ ಸಮಾಂತರ ಶ್ರೇಢಿಯ ಸಾಮಾನ್ಯ ವ್ಯತ್ಯಾಸ March-2022

A) -3 B) -2 C) 3 D) 8

3) 100, 93, 86, .......... ಈ ಸಮಾಂತರ ಶ್ರೇಢಿಯ ಸಾಮಾನ್ಯ ವ್ಯತ್ಯಾಸವು Model-QP : 2022

A. 4 B. 8 C. 7 D. -7

4) 5, 3, 1, –1, .......... ಈ ಸಮಾಂತರ ಶ್ರೇಢಿಯಲ್ಲಿ ಸಾಮಾನ್ಯ ವ್ಯತ್ಯಾಸ JUNE-2022

A) -2 B) 2 C) -3 D) 5

5) ಒಂದು ಸಮಾಂತರ ಶ್ರೇಢಿಯ $n$ ನೇ ಪದ $a_n = 24-3n$ ಆದಾಗ, ಆ ಶ್ರೇಢಿಯ 2 ನೇ ಪದವು

A) 18 B) 15 C) 0 D) 2 March : 2019



6) ಒಂದು ಸಮಾಂತರ ಶ್ರೇಢಿಯ $n$ ನೇ ಪದ $5n + 3$ ಆದಾಗ ಸಮಾಂತರ ಶ್ರೇಢಿಯ 3 ನೇ ಪದವು

A) 11 B) 18 C) 12 D) 13 June : 2019

7) ಒಂದು ಶ್ರೇಢಿಯ 'n' ನೇ ಪದವು $4n^2-1$ ಆದರೆ ಅದರ 8ನೇ ಪದವು MODEL -2 : 2020

A) 32 B) 31 C) 256 D) 255

8) ಒಂದು ಸಮಾಂತರ ಶ್ರೇಢಿಯ n ನೇ ಪದ $a_n = 3n+6$ ಆದರೆ 8 ನೇ ಪದ Prep : 2020

A) 25 B) 24 C) 30 D) 17

9) ಒಂದು ಸಮಾಂತರ ಶ್ರೇಢಿಯ n ನೇ ಪದ $a_n = 3n - 2$ ಆದರೆ 9 ನೇ ಪದ Sept : 2020

A) -25 B) 5 C) -5 D) 25

10) ಒಂದು ಸಮಾಂತರ ಶ್ರೇಢಿಯ $n$ ನೇ ಪದ $a_n = 4n + 5$ ಆದಾಗ, ಆ ಶ್ರೇಢಿಯ 3ನೇ ಪದವು

A) 5 B) 9 C) 13 D) 17 Model-1 : 2021

11) ಒಂದು ಸಮಾಂತರ ಶ್ರೇಢಿಯ n ನೇ ಪದ $a_n = 4n + 5$ ಆದಾಗ, ಅದರ 5ನೇ ಪದವು

A) 20 B) 14 C) 25 D) 24 July : 2021

12) ಒಂದು ಸಮಾಂತರ ಶ್ರೇಢಿಯಲ್ಲಿ $a_n = 2n + 1$ ಆದಾಗ ಆ ಶ್ರೇಢಿಯ ಸಾಮಾನ್ಯ ವ್ಯತ್ಯಾಸವು

A) 0 B) 1 C) 2 D) 3 June : 2020

13) ಒಂದು ಸಮಾಂತರ ಶ್ರೇಢಿಯ 'n' ನೇ ಪದ $a_n = 7 - 4n$ ಆದರೆ ಶ್ರೇಢಿಯಲ್ಲಿನ ಸಾಮಾನ್ಯ ವ್ಯತ್ಯಾಸ

A. 4 B. -4 C. 3 D. -3 Model-I : 2021

14) ಒಂದು ಸಮಾಂತರ ಶ್ರೇಢಿ 5,9,13,......... ನ 10ನೇ ಪದವು MODEL-1 : 2020

A) 36 B) 31 C) 41 D) 21

15) -3, -1, 1, 3 ....... ಈ ಸಮಾಂತರ ಶ್ರೇಢಿಯ 10ನೇ ಪದ Model-I : 2021

A. 20 B. -21 C. -15 D. 15

16) 1, 5, 9, 13 ........ ಈ ಸಮಾಂತರ ಶ್ರೇಢಿಯ 20ನೇ ಪದ Model-II : 2021

A. 77 B. 75 C. 76 D. 74

17) -3, -1, 1, 3, ............ಸಮಾಂತರ ಶ್ರೇಢಿಯ 11 ನೇ ಪದವು July : 2021

A) 23 B) -23 C) -17 D) 17

18) 0, 4, 8, 12 ........ ಈ ಸಮಾಂತರ ಶ್ರೇಢಿಯ 10ನೇ ಪದ

A) 36 B) 40 C) 44 D) 32.

19) $S_n = 50, S_{n-1} = 42$, ಆದರೆ $a_n$ ಬೆಲೆಯು Model-1:2020-21

A) 50 B) 42 C) 20 D) 8

20) ಒಂದು ಸಮಾಂತರ ಶ್ರೇಢಿಯ ಮೊದಲ 15 ಪದಗಳ ಮೊತ್ತ ಹಾಗೂ ಮೊದಲ 14 ಪದಗಳ ಮೊತ್ತಗಳು ಕ್ರಮವಾಗಿ 465 ಮತ್ತು 406 ಆದರೆ ಶ್ರೇಢಿಯ 15ನೇ ಪದವು Model-II : 2021

A. 95 B. 59 C. 69 D. 58

21) ಒಂದು ಸಮಾಂತರ ಶ್ರೇಢಿಯ ಮೊದಲ 10 ಪದಗಳ ಮೊತ್ತವು 155 ಆಗಿದೆ ಮತ್ತು ಅದೇ ಶ್ರೇಢಿಯ ಮೊದಲ 9 ಪದಗಳ ಮೊತ್ತವು 126 ಆದಾಗ ಶ್ರೇಢಿಯ 10ನೇ ಪದವು July : 2021

A) 27 B) 126 C) 29 D) 25



Use E-Papers, Save Tress
Above line hide when print out

22) ಒಂದು ಸಮಾಂತರ ಶ್ರೇಢಿಯ ಮೊದಲನೇ ಪದ ಹಾಗೂ ಕೊನೆಯ ಪದಗಳು ಕ್ರಮವಾಗಿ 'a' ಮತ್ತು 'l' ಆದರೆ, ಈ ಶ್ರೇಢಿಯ ಮೊದಲ 'n' ಪದಗಳ ಮೊತ್ತ. Model-II : 2021

A. $S_n = \frac{n(2a+l)}{2}$ B. $S_n = \frac{n(a+(n-1)d)}{2}$ C. $S_n = \frac{n(a+l)}{2}$ D. $S_n = \frac{a(n+l)}{2}$

23) ಮೊದಲ 'n' ಧನ ಬೆಸ ಸಂಖ್ಯೆಗಳ ಮೊತ್ತವನ್ನು ಕಂಡುಹಿಡಿಯುವ ಸೂತ್ರವು Prep : 2022

A) $S_n = n(n+1)$ B) $S_n = n(n-1)$ C) $S_n = n^3$ D) $S_n = n^2$

24) ಒಂದು ಸಮಾಂತರ ಶ್ರೇಢಿಯಲ್ಲಿ $S_1 = 5, S_2 = 12$ ಆದರೆ ಸಾಮಾನ್ಯ ವ್ಯತ್ಯಾಸವು Model-1: 2020-21

A) −2 B) 1 C) 2 D) 3

25) 2, x, 14 ಸಮಾಂತರ ಶ್ರೇಢಿಯಲ್ಲಿದ್ದಾಗ 'x' ನ ಬೆಲೆಯು Model-2 : 2021

A) 28 B) 16 C) 7 D) 8

26) 8, x, 20 ಸಮಾಂತರ ಶ್ರೇಢಿಯಲ್ಲಿದ್ದರೆ 'x' ನ ಬೆಲೆ Model-II : 2021

A. 10 B. −10 C. 14 D. 8

27) 4, x, 10 ಸಮಾಂತರ ಶ್ರೇಢಿಯಲ್ಲಿದ್ದರೆ 'x' ನ ಬೆಲೆಯು July : 2021

A) 14 B) -6 C) -7 D) 7

28) ಒಂದು ಸಮಾಂತರ ಶ್ರೇಢಿಯ ಪದಗಳು 18, a, b, −3 ಹಾಗಾದರೆ a+b =

A) 19 B) 15 C) 11 D) 7

29) x, 8, 11, y ಗಳು ಒಂದು ಸಮಾಂತರ ಶ್ರೇಢಿಯ ಅನುಕ್ರಮ ಪದಗಳಾದರೆ 'x' ಮತ್ತು 'y' ಗಳ ಬೆಲೆಗಳು ಕ್ರಮವಾಗಿ Model-II : 2021

A. 6 ಮತ್ತು 13 B. 4 ಮತ್ತು 15 C. 3 ಮತ್ತು 16 D. 5 ಮತ್ತು 14

30) 4, a, b, 28 ಪದಗಳು ಸಮಾಂತರ ಶ್ರೇಢಿಯಲ್ಲಿದ್ದರೆ 'b' ಯ ಬೆಲೆ Model-I : 2021

A. 20 B. 19 C. 23 D. 32

31) 7, a, b, 22 ಕ್ರಮಾನುಗತ ಪದಗಳು ಸಮಾಂತರ ಶ್ರೇಢಿಯಲ್ಲಿದ್ದರೆ a ಮತ್ತು bಯ ಬೆಲೆಗಳು ಕ್ರಮವಾಗಿ

A. 11 ಮತ್ತು 16 B. 12 ಮತ್ತು 17 C. 13 ಮತ್ತು 17 D. 12 ಮತ್ತು 16

32) ಎರಡು ಸಮಾಂತರ ಶ್ರೇಢಿಗಳ ಸಾಮಾನ್ಯ ವ್ಯತ್ಯಾಸವು ಸಮನಾಗಿದೆ. ಮೊದಲನೆ ಶ್ರೇಢಿಯ ಮೊದಲ ಪದವು 5 ಮತ್ತು ಎರಡನೇ ಶ್ರೇಢಿಯ ಮೊದಲನೇ ಪದವು 8 ಆಗಿದ್ದರೆ ಆ ಶ್ರೇಢಿಗಳ ಮೂರನೇ ಪದಗಳ ವ್ಯತ್ಯಾಸವು Model-I : 2021

A. 2 B. 3 C. 4 D. 5

33) ಒಂದು ಸಮಾಂತರ ಶ್ರೇಢಿಯ ಮೊದಲ 'n' ಪದಗಳ ಮೊತ್ತದ ಸೂತ್ರ $S_n = 3n^2 + n$, ಆದರೆ ಆ ಶ್ರೇಢಿಯ 3ನೇ ಪದ Model-I : 2021

A. 14 B. 16 C. 22 D. 42

**ಉತ್ತರಗಳು :** 1.B, 2.A, 3.D, 4.A, 5.A, 6.B, 7.D, 8.C, 9.D, 10.D, 11.C, 12.C, 13.B, 14.C, 15.D, 16.A, 17.D, 18.A, 19.D, 20.B, 21.C, 22.C, 23.D, 24.C, 25.D, 26.C, 27.D, 28.B, 29.D, 30.A, 31.B, 32.B, 33.B.



## ಒಂದು ಅಂಕದ ಪ್ರಶ್ನೆಗಳು :

1) ಸಮಾಂತರ ಶ್ರೇಢಿ ಎಂದರೇನು ? June-2022

**ಉತ್ತರ :** ಮೊದಲ ಪದವನ್ನು ಹೊರತುಪಡಿಸಿ ಪ್ರತಿಯೊಂದು ಪದವನ್ನು ಪಡೆಯಲು ಅದರ ಹಿಂದಿನ ಪದಕ್ಕೆ ಒಂದು ನಿರ್ದಿಷ್ಟ ಸಂಖ್ಯೆಯನ್ನು ಕೂಡಿಸುವುದರಿಂದ ಪಡೆಯುವ ಸಂಖ್ಯಾಪಟ್ಟಿಯೇ ಸಮಾಂತರ ಶ್ರೇಢಿ.

2) ಒಂದು ಸಮಾಂತರ ಶ್ರೇಢಿಯಲ್ಲಿ ಮೊದಲನೇ ಪದ 'a' ಮತ್ತು ಸಾಮಾನ್ಯ ವ್ಯತ್ಯಾಸ 'd' ಆದಾಗ, ಅದರ 'n'ನೇ ಪದವನ್ನು ಬರೆಯಿರಿ. April : 2022

**ಉತ್ತರ :** $a_n = a + (n-1)d$

3) ಒಂದು ಸಮಾಂತರ ಶ್ರೇಢಿಯ ಮೊದಲನೇ ಪದವು 'a' ಮತ್ತು ಕೊನೆಯ ಪದವು $a_n$ ಆದಾಗ, ಆ ಶ್ರೇಢಿಯ ಮೊದಲ $n$ ಪದಗಳವರೆಗಿನ ಮೊತ್ತವನ್ನು ಕಂಡುಹಿಡಿಯುವ ಸೂತ್ರವನ್ನು ಬರೆಯಿರಿ.

**ಉತ್ತರ :** $S_n = \frac{n}{2}\{a + a_n\}$ June : 2019

4) ಒಂದು ಸಮಾಂತರ ಶ್ರೇಢಿಯ ಮೊದಲನೇ ಪದ ಮತ್ತು ಸಾಮಾನ್ಯ ವ್ಯತ್ಯಾಸವು ಕ್ರಮವಾಗಿ 6 ಮತ್ತು 5 ಆಗಿದೆ. ಆ ಶ್ರೇಢಿಯ 3ನೇ ಪದವನ್ನು ಕಂಡುಹಿಡಿಯಿರಿ. Model-1: 2020

**ಉತ್ತರ :** $a = 6, d = 5, n = 3, a_3 = ?$

$a_3 = a + 2d$

$a_3 = 6 + 2\text{x}5$

$a_3 = 16$

5) ಒಂದು ಸಮಾಂತರ ಶ್ರೇಢಿಯಲ್ಲಿ $a_n = 3n + 2$ ಆದಾಗ, 12ನೇ ಪದವನ್ನು ಕಂಡುಹಿಡಿಯಿರಿ.

**ಉತ್ತರ :** $a_n = 3n + 2$ Prep : 2020

$a_{12} = 3\text{x}12 + 2$

$a_{12} = 36 + 2$

$\therefore a_{12} = 38$

6) ಒಂದು ಸಮಾಂತರ ಶ್ರೇಢಿಯಲ್ಲಿ $a_n = 3n - 2$ ಆದಾಗ, 2ನೇ ಪದವನ್ನು ಕಂಡುಹಿಡಿಯಿರಿ.

**ಉತ್ತರ :** $a_n = 3n - 2$ Model-2 : 2021

$a_2 = 3\text{x}2 - 2$

$a_2 = 6 - 2$

$\therefore a_2 = 4$

7) ಒಂದು ಸಮಾಂತರ ಶ್ರೇಢಿಯ 8ನೇ ಪದ 17 ಮತ್ತು 19ನೇ ಪದ 39. ಹಾಗಾದರೆ ಸಾಮಾನ್ಯ ವ್ಯತ್ಯಾಸವನ್ನು ಕಂಡುಹಿಡಿಯಿರಿ. Prep : 2020

**ಉತ್ತರ :** $a_8 = 17, a_{19} = 39, d = ?$

$d = \frac{a_q - a_p}{q-p}$

$d = \frac{a_{19} - a_8}{19-8}$

$d = \frac{39-17}{11}$

$\therefore d = 2$



Use E-Papers, Save Tress
Above line hide when print out

**8) ಒಂದು ಸಮಾಂತರ ಶ್ರೇಢಿಯ ಮೊದಲ ನಾಲ್ಕು ಪದಗಳ ಮೊತ್ತವು 20 ಮತ್ತು ಮೊದಲ ಮೂರು ಪದಗಳ ಮೊತ್ತವು 12 ಆಗಿದೆ. ಆ ಸಮಾಂತರ ಶ್ರೇಢಿಯ ನಾಲ್ಕನೇ ಪದವನ್ನು ಕಂಡುಹಿಡಿಯಿರಿ.**

**ಉತ್ತರ :** $a_n = S_n - S_{n-1}$ Model : 2021-22

$a_4 = S_4 - S_3 = 20 - 12 = 8$

**9) ಒಂದು ಸಮಾಂತರ ಶ್ರೇಢಿಯ 17ನೇ ಪದವು ಅದರ 10ನೇ ಪದಕ್ಕಿಂತ 7 ಹೆಚ್ಚಾಗಿದ್ದರೆ ಈ ಶ್ರೇಢಿಯ ಸಾಮಾನ್ಯ ವ್ಯತ್ಯಾಸವನ್ನು ಕಂಡುಹಿಡಿಯಿರಿ.** Prep : 2022

**ಉತ್ತರ :** $a_{17} = a_{10} + 7$

$\not{a} + 16d = \not{a} + 9d + 7$

$16d - 9d = 7$

$7d = 7$

$\mathbf{d = 1}$

## ಎರಡು ಅಂಕದ ಪ್ರಶ್ನೆಗಳು :

**1) 2, 7, 12, ..... ಸಮಾಂತರ ಶ್ರೇಢಿಯ 10ನೇ ಪದವನ್ನು ಸೂಕ್ತವಾದ ಸೂತ್ರ ಬಳಸಿ ಕಂಡುಹಿಡಿಯಿರಿ.**

**ಉತ್ತರ :** ಸಮಾಂತರ ಶ್ರೇಢಿ : 2, 7, 12, ....... Model-2 : 2021

ಇಲ್ಲಿ, $a = 2$, $d = 7-2 = 5$, $n = 10$, $a_{10} = ?$

ಸೂತ್ರ : $a_n = a + (n-1)d$

$a_{10} = 2 + (10-1)x5$

$a_{10} = 2 + 9x5$

$\therefore \mathbf{a_{10} = 47}$

**2) 2, 6, 10, 14, ......... ಈ ಸಮಾಂತರ ಶ್ರೇಢಿಯ 25 ನೇ ಪದವನ್ನು ಕಂಡುಹಿಡಿಯಿರಿ.**

**ಉತ್ತರ :** ಸಮಾಂತರ ಶ್ರೇಢಿ : 2, 6, 10, 14 ....... Model-1 : 2021

ಇಲ್ಲಿ, $a = 2$, $d = 6-2 = 4$, $n = 25$, $a_{25} = ?$

ಸೂತ್ರ : $a_n = a + (n-1)d$

$a_{25} = 2 + (25-1)x4$

$a_{25} = 2 + 24x4$

$\therefore \mathbf{a_{25} = 98}$

**3) ಎರಡು ಅಂಕಿಗಳ ಎಷ್ಟು ಸಂಖ್ಯೆಗಳು 3 ರಿಂದ ಭಾಗಿಸಲ್ಪಡುತ್ತದೆ ?**

**ಉತ್ತರ :** ಸಮಾಂತರ ಶ್ರೇಢಿ : 12, 15 , 18, ........ , 99

ಇಲ್ಲಿ, $a = 12$, $d = 3$ , $a_n = 99$ , $n = ?$

ಸೂತ್ರ : $a_n = a + (n-1)d$

$99 = 12 + (n-1)3$

L$99 = 12 + 3n - 3$

$99 - 9 = 3n$

$3n = 90$

$\mathbf{n = 30}$

∴ ಎರಡು ಅಂಕಿಗಳ 30 ಸಂಖ್ಯೆಗಳು 3 ರಿಂದ ಭಾಗಿಸಲ್ಪಡುತ್ತದೆ.



**4) ಮೂರನೇ ಪದ 16, 7ನೇ ಪದವು 5ನೇ ಪದಕ್ಕಿಂತ 12 ಹೆಚ್ಚಾಗಿರುವ ಸಮಾಂತರ ಶ್ರೇಢಿಯನ್ನು ಕಂಡುಹಿಡಿಯಿರಿ.**

**ಉತ್ತರ :** $a_3 = 16$

$a + 2d = 16$ --------- (1)

$a_7 = a_5 + 12$

$\not{a} + 6d = \not{a} + 4d + 12$

$2d = 12$

$\mathbf{d = 6}$

$d = 6$ ನ್ನು ಸಮೀಕರಣ (1) ರಲ್ಲಿ ಆದೇಶಿಸಿದಾಗ,

$a + 2x6 = 16$

$a = 16 - 12$

$\mathbf{a = 4}$

∴ ಸಮಾಂತರ ಶ್ರೇಢಿ : 4, 10, 16, 22, ..........

**5) 130 ಇದು ಸಮಾಂತರ ಶ್ರೇಢಿ 3, 7, 11 ......... ರ ಪದವಾಗಿದೆಯೇ ಪರೀಕ್ಷಿಸಿ.** Model : 2022

**ಉತ್ತರ :** $a = 3$, $d = 7-3 = 4$, $a_n = 130$, $n = ?$

$a_n = a + (n-1)d$

$130 = 3 + (n-1)x4$

$130 = 3 + 4n - 4$

$130 = 4n - 1$

$4n = 131$

$n = \frac{131}{4}$

ಇಲ್ಲಿ 'n' ಒಂದು ಪೂರ್ಣಾಂಕವಲ್ಲ.

∴ 130, ಇದು ಸಮಾಂತರ ಶ್ರೇಢಿ 3, 7, 11 ......... ರ ಪದವಾಗಿಲ್ಲ.

**6) 2+7+12+ ⋯⋯ ಈ ಸಮಾಂತರ ಶ್ರೇಣಿಯ ಮೊದಲ 20 ಪದಗಳ ಮೊತ್ತವನ್ನು ಸೂಕ್ತವಾದ ಸೂತ್ರದ ಸಹಾಯದಿಂದ ಕಂಡುಹಿಡಿಯಿರಿ.** March : 2019

**ಉತ್ತರ :** ಸಮಾಂತರ ಶ್ರೇಢಿ : 2+7+12+ ⋯⋯

ಇಲ್ಲಿ, $a = 2$, $d = 7-2 = 5$ , $n = 20$ , $S_{20} = ?$

ಸೂತ್ರ : $S_n = \frac{n}{2}\{2a + (n-1)d\}$

$S_{20} = \frac{20}{2}\{2x2 + (20-1)x5\}$

$S_{20} = 10x\{4 + 19x5\}$

$S_{20} = 10x\{4 + 95\} = 10 \times 99$

$\therefore \mathbf{S_{20} = 990}$



Use E-Papers, Save Tress
Above line hide when print out

**7) 3+6+9+ .................. ಈ ಸಮಾಂತರ ಶ್ರೇಢಿಯ ಮೊದಲ 15 ಪದಗಳ ಮೊತ್ತವನ್ನು ಸೂತ್ರವನ್ನು ಉಪಯೋಗಿಸಿ ಕಂಡುಹಿಡಿಯಿರಿ.** Model : 2022

**ಉತ್ತರ** : a = 3, d = 6-3 = 3 , n = 15 , $S_{15}$ = ?

$$S_n = \frac{n}{2}\{2a + (n-1)d\}$$

$$S_{15} = \frac{15}{2}\{2x3 + (15-1)x3\}$$

$$S_{15} = \frac{15}{2}\{6 + 14x3\}$$

$$S_{15} = \frac{15}{2}\{6 + 42\}$$

$$= \frac{15}{2} x48$$

$$\therefore S_{15} = 360$$

**8) 10, 7, 4, ..........., -62 ಈ ಸಮಾಂತರ ಶ್ರೇಢಿಯ ಕೊನೆಯಿಂದ 11 ನೇ ಪದ ಕಂಡುಹಿಡಿಯಿರಿ.**

**ಉತ್ತರ** : ಕೊಟ್ಟಿರುವ ಸಮಾಂತರ ಶ್ರೇಢಿಯನ್ನು ವಿರುದ್ಧ ಬದಿಯಿಂದ ಬರೆದರೆ : -62, .......,4,7,10

ಇಲ್ಲಿ, a = (-62), d = 7-4 = 3, n = 11, $a_{11}$ = ?

ಸೂತ್ರ : $a_n$ = a +(n-1)d

$a_{11}$ = -62+(11-1)x3

$a_{11}$ = -62+10x3

$\therefore a_{11}$ = -62+30 = (-32)

**9) ಮೊದಲ 20 ಧನ ಪೂರ್ಣಾಂಕಗಳ ಮೊತ್ತವನ್ನು ಸೂತ್ರ ಉಪಯೋಗಿಸಿ ಕಂಡುಹಿಡಿಯಿರಿ.** April :22

**ಉತ್ತರ** :

$$S_n = \frac{n(n+1)}{2}$$

n = 20

$$S_{20} = \frac{20(20+1)}{2}$$

$$= \frac{20x2}{2}$$

= 10x21

$S_{20}$ = 210

**10) 6 ರಿಂದ ಭಾಗಿಸಲ್ಪಡುವ ಮೊದಲ 30 ಧನ ಪೂರ್ಣಾಂಕಗಳ ಮೊತ್ತವನ್ನು ಕಂಡುಹಿಡಿಯಿರಿ.**

**ಉತ್ತರ** : ಸಮಾಂತರ ಶ್ರೇಢಿ : 6, 12, 18, ............ Model-1 : 2021

ಇಲ್ಲಿ, a = 6, d = 12-6 = 6 , n = 30 , $S_{30}$ = ?

ಸೂತ್ರ : $S_n = \frac{n}{2}\{2a + (n-1)d\}$

$$S_{30} = \frac{30}{2}\{2x6 + (30-1)x6\}$$



$$= \frac{30}{2}\{12 + 29x6\}$$

= 15{12 + 174}

= 15x186

$\therefore S_{30}$ = 2790

**11) 3, 6, 9, ............ ಈ ಸಮಾಂತರ ಶ್ರೇಢಿಯ ಎಷ್ಟು ಪದಗಳನ್ನು ಕೂಡಿದಾಗ ಮೊತ್ತ 165 ಆಗುತ್ತದೆ ಎಂದು ಕಂಡುಹಿಡಿಯಿರಿ.** JUNE-2022

**ಉತ್ತರ** : ಇಲ್ಲಿ, a = 3, d = 6 - 3 = 3 , $S_n$ = 165 n = ?

$$S_n = \frac{n}{2}\{2a + (n-1)d\}$$

$$165 = \frac{n}{2}\{2x3 + (n-1)x3\}$$

$$165 = \frac{n}{2}\{6 + 3n - 3\}$$

$$165 = \frac{n}{2}\{3n + 3\}$$

$$165 = \frac{n}{2}3\{n + 1\}$$

$$\frac{165x2}{3} = n\{n + 1\}$$

n{n + 1} = 110

n{n + 1} = 10x11

n = 10

∴ **ದತ್ತ ಶ್ರೇಢಿಯ 10 ಪದಗಳ ಮೊತ್ತವು 165 ಆಗಿರುತ್ತದೆ.**

## ಅಭ್ಯಾಸ ಪ್ರಶ್ನೆಗಳು :

1) 3, 8, 13 ............. ಈ ಸಮಾಂತರ ಶ್ರೇಢಿಯ 15 ನೇ ಪದವನ್ನು ಕಂಡುಹಿಡಿಯಿರಿ. Prep : 2022
ಉತ್ತರ : $a_{15}$ = 73

2) 5, 8, 11, ................. ಈ ಸಮಾಂತರ ಶ್ರೇಢಿಯ 30ನೇ ಪದವನ್ನು ಸೂತ್ರ ಉಪಯೋಗಿಸಿ ಕಂಡುಹಿಡಿಯಿರಿ. ಉತ್ತರ : $a_{30}$ = 92 April : 2022

3) 6, 10, 14 ................. ಈ ಸಮಾಂತರ ಶ್ರೇಢಿಯ 15ನೇ ಪದವನ್ನು ಸೂತ್ರವನ್ನು ಉಪಯೋಗಿಸಿ ಕಂಡುಹಿಡಿಯಿರಿ. ಉತ್ತರ : $a_{15}$ = 62 Model : 2022

4) 3, 7, 11, 15 ....... ಸಮಾಂತರ ಶ್ರೇಢಿಯ ಮೊದಲ 20 ಪದಗಳ ಮೊತ್ತವನ್ನು ಸೂತ್ರದ ಸಹಾಯದಿಂದ ಕಂಡುಹಿಡಿಯಿರಿ. ಉತ್ತರ : $S_{20}$ = 820 Prep : 2020

5) 5+8+11+ ........ 10 ಪದಗಳವರೆಗಿನ ಮೊತ್ತವನ್ನು ಸೂತ್ರ ಉಪಯೋಗಿಸಿ ಕಂಡುಹಿಡಿಯಿರಿ.
ಉತ್ತರ : $S_{10}$ = 185 June-2020

6) 5+10+15+⋯ ಈ ಸಮಾಂತರ ಶ್ರೇಣಿಯ ಮೊದಲ 20 ಪದಗಳ ಮೊತ್ತವನ್ನು ಸೂಕ್ತವಾದ ಸೂತ್ರದ ಸಹಾಯದಿಂದ ಕಂಡುಹಿಡಿಯಿರಿ. ಉತ್ತರ : $S_{20}$ = 1050 Sept : 2020

7) 3, 8, 13, ................ ಸಮಾಂತರ ಶ್ರೇಢಿಯ ಮೊದಲ 20 ಪದಗಳ ಮೊತ್ತವನ್ನು ಸೂತ್ರ ಉಪಯೋಗಿಸಿ ಕಂಡುಹಿಡಿಯಿರಿ. ಉತ್ತರ : $S_{20}$ = 1010 Model-1 : 2021

8) 2+5+8+........... 20 ಪದಗಳವರೆಗಿನ ಮೊತ್ತವನ್ನು ಸೂತ್ರ ಉಪಯೋಗಿಸಿ ಕಂಡುಹಿಡಿಯಿರಿ.
ಉತ್ತರ : $S_{20}$ = 610 Model-2 : 2021



Use E-Papers, Save Tress
Above line hide when print out

9) 2 + 7 + 12 + .................. 20 ಪದಗಳವರೆಗಿನ ಮೊತ್ತವನ್ನು ಸೂತ್ರ ಉಪಯೋಗಿಸಿ ಕಂಡುಹಿಡಿಯಿರಿ. ಉತ್ತರ : $S_{20} = 990$ Prep : 2022

10) 10, 15, 20, .................. ಈ ಸಮಾಂತರ ಶ್ರೇಢಿಯ ಮೊದಲ 20 ಪದಗಳ ಮೊತ್ತವನ್ನು ಸೂತ್ರವನ್ನು ಉಪಯೋಗಿಸಿ ಕಂಡುಹಿಡಿಯಿರಿ. ಉತ್ತರ : $S_{20} = 1150$ April : 2022

11) 2, 5, 8, .................. ಈ ಸಮಾಂತರ ಶ್ರೇಢಿಯ 12ನೇ ಪದವನ್ನು ಸೂತ್ರ ಉಪಯೋಗಿಸಿ ಕಂಡುಹಿಡಿಯಿರಿ. ಉತ್ತರ : $a_{12} = 35$ JUNE-2022

12) 7, 11, 15, .................. ಈ ಸಮಾಂತರ ಶ್ರೇಢಿಯ 16 ಪದಗಳವರೆಗಿನ ಮೊತ್ತವನ್ನು ಸೂತ್ರವನ್ನು ಉಪಯೋಗಿಸಿ ಕಂಡುಹಿಡಿಯಿರಿ. ಉತ್ತರ : $S_{16} = 592$ JUNE-2022

## ಮೂರು ಅಂಕದ ಪ್ರಶ್ನೆಗಳು :

**1) ಒಂದು ಸಮಾಂತರ ಶ್ರೇಢಿಯ 7ನೇ ಪದವು ಅದರ 2ನೇ ಪದದ ನಾಲ್ಕರಷ್ಟಿದೆ. ಹಾಗೂ ಶ್ರೇಢಿಯ 12ನೇ ಪದವು 4ನೇ ಪದದ ಮೂರರಷ್ಟಕ್ಕಿಂತ 2 ಹೆಚ್ಚಾಗಿದೆ. ಹಾಗಾದರೆ ಆ ಶ್ರೇಢಿಯನ್ನು ಕಂಡುಹಿಡಿಯಿರಿ.**

**ಉತ್ತರ :** March-2019

ಸೂತ್ರ : $a_n = a + (n-1)d$

ದತ್ತದ ಪ್ರಕಾರ, $a_7 = 4(a_2)$

$a + 6d = 4x(a+d)$

$a + 6d = 4a+4d$

$4a - a + 4d - 6d = 0$

$3a - 2d = 0$ ----------- (1)

ದತ್ತದ ಪ್ರಕಾರ, $a_{12} = 3(a_4)+2$

$a + 11d = 3(a+3d)+2,$

$a + 11d = 3a+9d+2$

$a - 3a + 11d - 9d = 2$

$-2a + 2d = 2$ --------- (2)

ಸಮೀಕರಣ (1) + ಸಮೀಕರಣ(2) ಮಾಡಿದಾಗ,

$3a - 2d = 0$

$-2a + 2d = 2$

$\mathbf{a = 2}$

a = 2 ನ್ನು ಸಮೀಕರಣ (1) ರಲ್ಲಿ ಆದೇಶಿಸಿದಾಗ,

$3x2 - 2d = 0$

$2d = 6$

$\mathbf{d = 3}$

ಸಮಾಂತರ ಶ್ರೇಢಿ : a , a+d, a+2d, .....

∴ **ಬೇಕಾದ ಸಮಾಂತರ ಶ್ರೇಢಿ : 2, 5, 8, ..........**

**2) ಒಂದು ರೇಖಾಖಂಡವನ್ನು ಸಮಾಂತರ ಶ್ರೇಢಿಯಲ್ಲಿರುವಂತೆ ನಾಲ್ಕು ಭಾಗಗಳಾಗಿ ವಿಭಾಗಿಸಿದೆ. ಇವುಗಳಲ್ಲಿ ಮೂರನೇ ಮತ್ತು ನಾಲ್ಕನೇ ಭಾಗದ ಉದ್ದಗಳ ಮೊತ್ತವು ಮೊದಲೆರಡು ಭಾಗಗಳ ಉದ್ದಗಳ ಮೊತ್ತದ್ದ ಮೂರರಷ್ಟಿದೆ. ನಾಲ್ಕನೇ ಭಾಗದ ಉದ್ದವು 14 ಸೆಂ.ಮೀ.ಗಳಾದರೆ. ಆ ರೇಖಾಖಂಡದ ಉದ್ದವನ್ನು ಕಂಡುಹಿಡಿಯಿರಿ.** March : 2019



**ಉತ್ತರ :** ರೇಖಾಖಂಡದ ನಾಲ್ಕು ಭಾಗಗಳು : a , a+d, a+2d, a+3d ಆಗಿರಲಿ.

ದತ್ತದ ಪ್ರಕಾರ, $a_3 + a_4 = 3(a_1 + a_2)$

$a+2d + a+3d = 3(a + a+d)$

$2a+5d = 6a + 3d$

$4a - 2d = 0$ ------ (1)

ದತ್ತದ ಪ್ರಕಾರ, $a_4 = 14 \Rightarrow a+3d = 14$ --------(2)

ಸಮೀಕರಣ (1) x 3 ಮತ್ತು (2) x 2 ಮಾಡಿ, ಸಮೀಕರಣ ಬಿಡಿಸಿದಾಗ

$4a - 2d = 0$ x3

$a+3d = 14$ x2

$12a - 6d = 0$

$2a + 6d = 28$

$14a = 28$

$\mathbf{a = 2}$

a = 2 ನ್ನು ಸಮೀಕರಣ (1) ರಲ್ಲಿ ಆದೇಶಿಸಿದಾಗ,

$4x2 - 2d = 0$

$2d = 8$

$\mathbf{d = 4}$

ರೇಖಾಖಂಡದ ನಾಲ್ಕು ಭಾಗಗಳ ಉದ್ದ = a + a+d + a+2d + a+3d = 4a+ 6d

= 4x2 + 6x4 = 8+24

∴ **ರೇಖಾಖಂಡದ ನಾಲ್ಕು ಭಾಗಗಳ ಉದ್ದ = 32 cm**

**3) ಒಂದು ಸಮಾಂತರ ಶ್ರೇಢಿಯ ಮೊದಲ n ಪದಗಳ ಮೊತ್ತವು 210 ಮತ್ತು (n-1) ಪದಗಳ ಮೊತ್ತವು 171 ಆಗಿದ್ದು, ಶ್ರೇಢಿಯ ಮೊದಲನೇ ಪದವು 3 ಆದಾಗ ಸಮಾಂತರ ಶ್ರೇಢಿಯನ್ನು ಕಂಡುಹಿಡಿಯಿರಿ.** MODEL-2 : 2020

**ಉತ್ತರ** : $S_n = 210, S_{n-1} = 171, a = 3$

ಸೂತ್ರ : $S_n = \frac{n}{2}\{2a + (n-1)d\}$

$210 = \frac{n}{2}\{2x3 + (n-1)xd\}$

$420 = n\{6 + (n-1)xd\}$ ------------- (1)

$S_n - S_{n-1} = a_n$

$210-171 = a_n$

$a_n = a + (n-1)d$

$39 = 3 + (n-1)d$

$(n-1)d = 36$ --------- (2)

ಸಮೀಕರಣ (2)ನ್ನು ಸಮೀಕರಣ (1) ರಲ್ಲಿ ಆದೇಶಿಸಿದಾಗ,

$420 = n\{6 + 36\}$

$42n = 420$

$\mathbf{n = 10}$

n = 10 ನ್ನು ಸಮೀಕರಣ (2) ರಲ್ಲಿ ಆದೇಶಿಸಿದಾಗ,



Use E-Papers, Save Tress
Above line hide when print out

$(10-1)d = 36$

$9d = 36$

**d = 4**

∴ ಸಮಾಂತರ ಶ್ರೇಢಿ : a , a+d, a+2d, ..... ∴ **ಬೇಕಾದ ಸಮಾಂತರ ಶ್ರೇಢಿ : 3, 7, 11, .........**

**4) ಒಂದು ಸಮಾಂತರ ಶ್ರೇಢಿಯಲ್ಲಿ 12ನೇ ಪದ –13 ಮತ್ತು ಮೊದಲ 4 ಪದಗಳ ಮೊತ್ತ 24. ಹಾಗಾದರೆ ಮೊದಲ 20 ಪದಗಳ ಮೊತ್ತವನ್ನು ಕಂಡುಹಿಡಿಯಿರಿ.** Prep : 2020

**ಉತ್ತರ :**

ಸೂತ್ರ : $a_n = a + (n-1)d$

ದತ್ತದ ಪ್ರಕಾರ, $a_{12} = -13 \Rightarrow a + 11d = -13$ ----------- (1)

ಮೊದಲ 4 ಪದಗಳ ಮೊತ್ತ = 24.

$a + a+d+a+2d+a+3d = 24$

$4a + 6d = 24$ --------- (2)

ಸಮೀಕರಣ (1)x4 ಮಾಡಿ, ಸಮೀಕರಣ (1) ಮತ್ತು (2) ನ್ನು ಬಿಡಿಸಿದಾಗ

$4a + 44d = -52$

$_{(-)}4a +_{(-)} 6d = _{(-)}24$

$38d = -76$

**d = -2**

d = -2 ನ್ನು ಸಮೀಕರಣ (1) ರಲ್ಲಿ ಆದೇಶಿಸಿದಾಗ

$a + 11x\text{-}2 = -13$

$a = -13 + 22$

**a = 9**

**ಮೊದಲ 20 ಪದಗಳ ಮೊತ್ತ :**

$S_n = \frac{n}{2}\{2a + (n-1)d\}$

$S_{20} = \frac{20}{2}\{2x9 + (20-1)x - 2\}$

$S_{20} = 10x\{18 + 19x - 2\}$

$S_{20} = 10 \text{ x } \{18 - 38\} = 10 \text{ x } -20$

**∴ $S_{20} = (-200)$**

**5) ಒಂದು ಸಮಾಂತರ ಶ್ರೇಢಿಯಲ್ಲಿ 14ನೇ ಪದವು, 8ನೇ ಪದದ ಎರಡರಷ್ಟಿರುತ್ತದೆ. 6ನೇ ಪದವು –8 ಆದಾಗ, ಮೊದಲ 20 ಪದಗಳ ಮೊತ್ತವನ್ನು ಕಂಡುಹಿಡಿಯಿರಿ.** Prep : 2020

**ಉತ್ತರ** : ಸೂತ್ರ : $a_n = a + (n-1)d$

ದತ್ತದ ಪ್ರಕಾರ, $a_{14} = 2x\ a_8$

$a + 13d = 2(a+7d)$

$a + d = 0$ ----------- (1)

ದತ್ತದ ಪ್ರಕಾರ, $a_6 = -8$

$a + 5d = -8$ --------- (2)

ಸಮೀಕರಣ (1) ಮತ್ತು (2) ನ್ನು ಬಿಡಿಸಿದಾಗ,



$a + d = 0$

$_{(-)}a +_{(-)} 5d = -_{(+)}8$

$-4d = 8$

**d = -2**

d = -2 ನ್ನು ಸಮೀಕರಣ (1) ರಲ್ಲಿ ಆದೇಶಿಸಿದಾಗ,

$a + (-2) = 0$ **a = 2**

**ಮೊದಲ 20 ಪದಗಳ ಮೊತ್ತ :**

ಸೂತ್ರ : $S_n = \frac{n}{2}\{2a + (n-1)d\}$

$S_{20} = \frac{20}{2}\{2x2 + (20-1)x - 2\}$

$S_{20} = 10x\{4 + 19x - 2\}$

$S_{20} = 10 \text{ x } \{4 - 38\} = 10 \text{ x } -34$

**∴ $S_{20} = (-340)$**

**6) ಒಂದು ಸಮಾಂತರ ಶ್ರೇಢಿಯಲ್ಲಿ 37 ಪದಗಳಿವೆ. ಮಧ್ಯದ ಪದ ಹಾಗೂ ಅದರ ಎರಡು ಕಡೆಯ ಒಂದೊಂದು ಪಾರ್ಶ್ವಪದಗಳ ಮೊತ್ತ 225 ಆಗಿದೆ. ಹಾಗೂ ಇದೇ ಶ್ರೇಢಿಯ ಕೊನೆಯ ಮೂರು ಪದಗಳ ಮೊತ್ತ 429 ಆದರೆ ಶ್ರೇಢಿಯ ಮೊದಲ ಮೂರು ಪದಗಳನ್ನು ಕಂಡುಹಿಡಿಯಿರಿ.**

**ಉತ್ತರ** : ಸಮಾಂತರ ಶ್ರೇಢಿ : a , a+d, a+2d, ........., a+36d

ಮಧ್ಯದ ಪದ = $a_{19} = a + 18d$

ಅದರ ಎರಡು ಕಡೆಯ ಒಂದೊಂದು ಪಾರ್ಶ್ವಪದಗಳು = $a_{18} = a + 17d$,

ಮತ್ತು $a_{20} = a + 19d$

ಮಧ್ಯದ ಪದ ಹಾಗೂ ಅದರ ಎರಡು ಕಡೆಯ ಒಂದೊಂದು ಪಾರ್ಶ್ವಪದಗಳ ಮೊತ್ತ = 225

∴ $a + 18d + a + 17d + a + 19d = 225$

$3a + 54d = 225$ ------ (1)

ಶ್ರೇಢಿಯ ಕೊನೆಯ ಮೂರು ಪದಗಳ ಮೊತ್ತ = 429

$a + 34d + a + 35d + a + 36d = 429$

$3a + 105d = 429$ -------- (2)

ಸಮೀಕರಣ (1) ಮತ್ತು (2) ನ್ನು ಬಿಡಿಸಿದಾಗ,

$3a + 105d = 429$

$_{(-)}3a +_{(-)} 54d = _{(-)}225$

$51d = 204$

**d = 4**

d = 4 ನ್ನು ಸಮೀಕರಣ (1) ರಲ್ಲಿ ಆದೇಶಿಸಿದಾಗ,

$3a + 54x4 = 225$

$3a = 225\text{-}216$

**a = 3**

∴ **ಸಮಾಂತರ ಶ್ರೇಢಿ : a , a+d, a+2d = 3, 7, 11, .......**



Use E-Papers, Save Trees
Above line hide when print out

7) ಒಂದು ಸಮಾಂತರ ಶ್ರೇಢಿಯ 11 ನೇ ಪದ ಮತ್ತು 8 ನೇ ಪದಗಳ ಅನುಪಾತ 2 : 3 ಆಗಿದೆ. ಹಾಗಾದರೆ ಶ್ರೇಢಿಯ 5ನೇ ಪದ ಮತ್ತು 21 ನೇ ಪದಗಳ ಅನುಪಾತವನ್ನು ಕಂಡು ಹಿಡಿದು, ಶ್ರೇಢಿಯ ಮೊದಲ 5 ಪದಗಳ ಮೊತ್ತ ಮತ್ತು ಮೊದಲ 21 ಪದಗಳ ಮೊತ್ತದ ಅನುಪಾತವನ್ನು ಕಂಡುಹಿಡಿಯಿರಿ.

**ಉತ್ತರ** : $a_n = a + (n-1)d$

$a_{11} : a_8 = 2 : 3$

$\frac{a+10d}{a+7d} = \frac{2}{3}$

$3(a+10d) = 2(a+7d)$

$3a + 30d = 2a+14d$

$a = -16d$

$a_5 : a_{21} = \frac{a+4d}{a+20d} = \frac{-16d+4d}{-16d+20d} = \frac{-12d}{4d} = \frac{-3}{1} = 3 : 1$

ಸೂತ್ರ : $S_n = \frac{n}{2}\{2a + (n-1)d\}$

$S_5 : S_{21} = \frac{5}{2}\{2a + 4d\} : \frac{21}{2}\{2a + 20d\}$

$= 5(-32d+4d) : 21(-32d + 20d)$

$= 5(-28d) : 21(-12d)$

$= -140d : -252d$

$\therefore S_5 : S_{21} = 5 : 9$

8) ಒಂದು ಶಾಲೆಯ ವಿದ್ಯಾರ್ಥಿಗಳ ಸಮಗ್ರ ವಾರ್ಷಿಕ ನಿರ್ವಹಣೆಗಾಗಿ 7 ನಗದು ಬಹುಮಾನಕ್ಕಾಗಿ ರೂ.700 ಮೊತ್ತವನ್ನು ನೀಡಲಾಗಿತ್ತು. ಪ್ರತಿ ಬಹುಮಾನವು ಅದರ ಮುಂಚಿನ ಬಹುಮಾನಕ್ಕಿಂತ ರೂ.20 ಕಡಿಮೆಯಾದರೆ ಪ್ರತಿ ಬಹುಮಾನಗಳ ಮೌಲ್ಯ ಕಂಡುಹಿಡಿಯಿರಿ. Model : 2022

**ಉತ್ತರ** :

ಮೊದಲನೇ ಬಹುಮಾನ 'a' ಆಗಿರಲಿ. (-20)

ಎರಡನೇ ಬಹುಮಾನ = a – 20

ಮೂರನೇ ಬಹುಮಾನ = a – 40

ಇದು ಒಂದು ಸಮಾಂತರ ಶ್ರೇಢಿಯಾಗಿದ್ದು, ಸಾಮಾನ್ಯ ವ್ಯತ್ಯಾಸ = d = (-20) ಮತ್ತು ಮೊದಲ ಪದ a.

$S_7 = 700$

$S_n = \frac{n}{2}\{2a + (n-1)d\}$

$700 = \frac{7}{2}\{2a + (7-1)(-20)\}$

$1400 = 7\{2a - 120\}$

$2a - 120 = \frac{1400}{7}$

$2a - 120 = 200$

$2a = 200 + 120$

**a = 160**

∴ ಬಹುಮಾನಗಳ ಮೌಲ್ಯ = Rs 160, 140, 120, 100, 80, 60 ಮತ್ತು 40.



9) 10 ಮತ್ತು 250 ರ ನಡುವಿನ ಎಲ್ಲಾ 4 ರ ಗುಣಕಗಳ ಮೊತ್ತವನ್ನು ಕಂಡುಹಿಡಿಯಿರಿ. Prep : 2022

**ಉತ್ತರ** : ಸಮಾಂತರ ಶ್ರೇಢಿ 12, 16, 20, ................., 248.

ಇಲ್ಲಿ, $a = 12$, $d = 16-12 = 4$, $a_n = 248$, $n = ?$ ಮತ್ತು $S_n = ?$

$a_n = a + (n-1)d$

$248 = 12 + (n-1)x4$

$248 = 12 + 4n - 4$

$248 = 4n + 8$

$4n = 248 - 8$

$n = \frac{240}{4}$

**n = 60**

$S_n = \frac{n}{2}\{a + a_n\}$

$S_n = \frac{60}{2}\{12 + 248\}$

$S_n = 30\{260\}$

$S_n = 7800$

10) ಒಂದು ಸಮಾಂತರ ಶ್ರೇಢಿಯ ಮೊದಲ 9 ಪದಗಳ ಮೊತ್ತವು 144 ಆಗಿದೆ. ಮತ್ತು ಅದರ 9 ನೇ ಪದವು 28 ಆದಾಗ, ಈ ಸಮಾಂತರ ಶ್ರೇಢಿಯ ಮೊದಲನೇ ಪದ ಮತ್ತು ಸಾಮಾನ್ಯ ವ್ಯತ್ಯಾಸವನ್ನು ಕಂಡುಹಿಡಿಯಿರಿ. April : 2022

**ಉತ್ತರ** : $n = 9$, $a_9 = 28$, $S_9 = 144$, $a = ?$, $d = ?$

$S_n = \frac{n}{2}[a + a_n]$

$S_9 = \frac{9}{2}[a + 28]$

$144 = \frac{9}{2}[a + 28]$

$\frac{144x2}{9} = a + 28$

$32 = a + 28$

$a = 32 - 28$

**a = 4**

$a_n = a + (n-1)d$

$a_9 = 4 + (9-1)d$

$28 = 4 + 8d$

$8d = 28 - 4$

$d = \frac{24}{8}$

**d = 3**

∴ ಸಮಾಂತರ ಶ್ರೇಢಿಯ ಮೊದಲನೇ ಪದ $a = 4$ ಮತ್ತು ಸಾಮಾನ್ಯ ವ್ಯತ್ಯಾಸ $d = 3$



Use E-Papers, Save Trees
Above line hide when print out

**11) ಒಂದು ಸಮಾಂತರ ಶ್ರೇಢಿಯ ಮೂರನೇ ಪದ 16 ಆಗಿದೆ ಮತ್ತು ಅದರ 7 ನೇ ಪದವು 5ನೇ ಪದಕ್ಕಿಂತ 12 ಹೆಚ್ಚಾಗಿದ್ದರೆ, ಆ ಸಮಾಂತರ ಶ್ರೇಢಿಯನ್ನು ಕಂಡುಹಿಡಿಯಿರಿ.** JUNE-2022

ಉತ್ತರ : $a_n = a + (n-1)d$

ದತ್ತದ ಪ್ರಕಾರ, $a_3 = 16$

$a + 2d = 16$ -------------- (1)

ದತ್ತದ ಪ್ರಕಾರ, $a_7 = a_5 + 12$

$a + 6d = a + 4d + 12$

$6d - 4d = 12$

$2d = 12$

$d = \frac{12}{2}$

$\mathbf{d = 6}$

d = 6 ನ್ನು ಸಮೀಕರಣ (1) ರಲ್ಲಿ ಆದೇಶಿಸಿದಾಗ $a + 2d = 16$

$a + 2 \times 6 = 16$

$a + 12 = 16$

$a = 16 - 12$

$\mathbf{a = 4}$

**∴ ಸಮಾಂತರ ಶ್ರೇಢಿ = a, a+d, a+2d = 4, 10, 16, ......................**

## ನಾಲ್ಕು ಅಂಕದ ಪ್ರಶ್ನೆಗಳು :

**1) ಒಂದು ಸಮಾಂತರ ಶ್ರೇಢಿಯ 4 ನೇ ಮತ್ತು 8 ನೇ ಪದಗಳ ಮೊತ್ತ 24 ಮತ್ತು 6 ನೇ ಮತ್ತು 10 ನೇ ಪದಗಳ ಮೊತ್ತವು 44 ಆದರೆ ಆ ಶ್ರೇಢಿಯ ಮೊದಲ ಮೂರು ಪದಗಳನ್ನು ಕಂಡುಹಿಡಿಯಿರಿ.**

ಉತ್ತರ : $a_n = a + (n-1)d$ June : 2019

ದತ್ತದ ಪ್ರಕಾರ, $a_4 + a_8 = 24$

$a + 3d + a + 7d = 24$

$2a + 10d = 24$ -----------(1)

$a_6 + a_{10} = 24$

$a + 5d + a + 9d = 44$

$2a + 14d = 44$ ---------(2)

ಸಮೀಕರಣ (1) – ಸಮೀಕರಣ (2) ಮಾಡಿದಾಗ,

$2a + 10d = 24$

$(-)2a +_{(-)} 14d =_{(-)} 44$

$-4d = -20$

$d = \frac{20}{4} \Longrightarrow \mathbf{d = 5}$

d = 5 ನ್ನು ಸಮೀಕರಣ (1) ರಲ್ಲಿ ಆದೇಶಿಸಿದಾಗ,

$2a + 10 \times 5 = 24 \Longrightarrow 2a = 24 - 50 \Longrightarrow \mathbf{a = -13}$

**∴ ಸಮಾಂತರ ಶ್ರೇಢಿ : a , a+d, a+2d,.....**

**∴ ಬೇಕಾದ ಸಮಾಂತರ ಶ್ರೇಢಿ : -13, -8, -3, ..........**



**2) ಒಂದು ಸಮಾಂತರ ಶ್ರೇಢಿಯ ಮೊದಲ ಮೂರು ಪದಗಳ ಮೊತ್ತ 33 ಆಗಿದೆ. ಮೊದಲನೇ ಪದ ಮತ್ತು 3ನೇ ಪದಗಳ ಗುಣಲಬ್ಧವು ಅದರ 2ನೇ ಪದಕ್ಕಿಂತ 29 ಹೆಚ್ಚಾಗಿದ್ದರೆ, ಸಮಾಂತರ ಶ್ರೇಢಿಯನ್ನು ಕಂಡುಹಿಡಿಯಿರಿ.** MODEL-1 : 2020

ಉತ್ತರ : ಒಂದು ಸಮಾಂತರ ಶ್ರೇಢಿಯ ಮೊದಲನೇ ಪದ = (a –d),

ಎರಡನೇ ಪದ = a, ಮತ್ತು ಮೂರನೇ ಪದ = (a+d) ಆಗಿರಲಿ.

ಮೊದಲ ಮೂರು ಪದಗಳ ಮೊತ್ತ = 33

$a - d + a + a + d = 33$

$3a = 33$

$\mathbf{a = 11}$

ದತ್ತದ ಪ್ರಕಾರ,

ಮೊದಲನೇ ಪದ ಮತ್ತು 3ನೇ ಪದಗಳ ಗುಣಲಬ್ಧವು ಅದರ 2ನೇ ಪದಕ್ಕಿಂತ 29 ಹೆಚ್ಚಾಗಿದ್ದರೆ,

$(a-d)(a+d) = a + 29$

$a^2 - d^2 = a + 29$

$11^2 - d^2 = 11 + 29$

$121 - d^2 = 40$

$d^2 = 121 - 40$

$d^2 = 81$

$\mathbf{d = 9}$

**∴ ಸಮಾಂತರ ಶ್ರೇಢಿ : a - d, a , a + d,.....**

**∴ ಬೇಕಾದ ಸಮಾಂತರ ಶ್ರೇಢಿ : 11-9, 11, 11+9, .......... = 2, 11, 20,.........**

**3) ಒಂದು ಸಮಾಂತರ ಶ್ರೇಢಿಯ ಮೊದಲ 8 ಪದಗಳ ಮೊತ್ತ 136 ಮತ್ತು ಅದರ ಮೊದಲ 15 ಪದಗಳ ವರೆಗಿನ ಮೊತ್ತ 465 ಆದರೆ ಆ ಶ್ರೇಢಿಯ ಮೊದಲ 25 ಪದಗಳ ಮೊತ್ತವನ್ನು ಕಂಡುಹಿಡಿಯಿರಿ.**

ಉತ್ತರ : $S_8 = 136$ MODEL-2 : 2020

ಸೂತ್ರ : $S_n = \frac{n}{2}\{2a + (n-1)d\}$

$S_8 = \frac{8}{2}\{2a + (8-1)d\}$

$136 = 4\{2a + 7d\}$

$2a + 7d = 34$ --------- (1)

$S_{15} = 465$

$465 = \frac{15}{2}\{2a + (15-1)d\}$

$465 = \frac{15}{2}\{2a + 14d\}$

$2a + 14d = 62$ --------- (2)

ಸಮೀಕರಣ (2) ರಿಂದ (1) ನ್ನು ಕಳೆದಾಗ,

$2a + 14d = 62$

$(-)2a +_{(-)} 7d =_{(-)} 34$

$7d = 28$

$\mathbf{d = 4}$



Use E-Papers, Save Trees
Above line hide when print out

$d = 4$ ನ್ನು ಸಮೀಕರಣ (1) ರಲ್ಲಿ ಆದೇಶಿಸಿದಾಗ,

$2a + 7(4) = 34 \Rightarrow 2a = 34 - 28 \Rightarrow \mathbf{a = 6}$

**ಮೊದಲ 25 ಪದಗಳ ಮೊತ್ತ :**

$S_n = \frac{n}{2}\{2a + (n-1)d\}$

$S_{25} = \frac{25}{2}\{2x6 + (25-1)4\}$

$S_{25} = \frac{25}{2}\{12 + 96\}$

$S_{25} = \frac{25}{2}$ x 108

$S_{25} = 25x54$

$\therefore S_{25} = \mathbf{1350}$

**4) ಎರಡು ಸಮಾಂತರ ಶ್ರೇಢಿಯ ಮೊದಲ ಪದಗಳು ಸಮನಾಗಿದ್ದು, ಸಾಮಾನ್ಯ ವ್ಯತ್ಯಾಸಗಳ ಅನುಪಾತ 1 : 2 ಆಗಿದೆ. ಮೊದಲನೇ ಸಮಾಂತರ ಶ್ರೇಢಿಯ 7ನೇ ಪದ ಹಾಗೂ ಎರಡನೇ ಸಮಾಂತರ ಶ್ರೇಢಿಯ 21ನೇ ಪದ ಕ್ರಮವಾಗಿ 23 ಮತ್ತು 125 ಆದರೆ, ಎರಡು ಸಮಾಂತರ ಶ್ರೇಢಿಗಳನ್ನು ಕಂಡುಹಿಡಿಯಿರಿ.**

Prep : 2020

**ಉತ್ತರ** : a ಮತ್ತು d ಗಳು ಒಂದನೇ ಸಮಾಂತರ ಶ್ರೇಢಿಯ ಮೊದಲ ಪದ ಹಾಗೂ ಸಾಮಾನ್ಯ ವ್ಯತ್ಯಾಸಗಳಾಗಿರಲಿ,

A ಮತ್ತು D ಗಳು ಎರಡನೇ ಸಮಾಂತರ ಶ್ರೇಢಿಯ ಮೊದಲ ಪದ ಹಾಗೂ ಸಾಮಾನ್ಯ ವ್ಯತ್ಯಾಸಗಳಾಗಿರಲಿ.

ದತ್ತದ ಪ್ರಕಾರ, $a = A$; $D = 2d$; $a_7 = 23 \Rightarrow a + 6d = 23$ ------- (1)

$A_{21} = 125 \Rightarrow A + 20D = 125 \Rightarrow a + 40d = 125$ ------ (2)

ಸಮೀಕರಣ (2) – (1) ಮಾಡಿದಾಗ,

$a + 40d = 125$

$_{(-)}a +_{(-)} 6d =_{(-)} 23$

$34d = 102$

$d = \frac{102}{34}$

$\mathbf{d = 3}$

$d = 3$ ಎಂದು ಸಮೀಕರಣ (1) ರಲ್ಲಿ ಆದೇಶಿಸಿದಾಗ,

$a + 6(3) = 23 \Rightarrow a = 23 - 18 \Rightarrow a = 5$

ಮತ್ತು $D = 2d = 2x\ 3 = \mathbf{6}$

**∴ ಸಮಾಂತರ ಶ್ರೇಢಿಗಳು: 5, 8, 11 . . . ಮತ್ತು 5, 11, 17. . .**

**5) ಒಂದು ಸಮಾಂತರ ಶ್ರೇಢಿಯಲ್ಲಿ 5 ಪದಗಳಿದ್ದು ಅವುಗಳ ಮೊತ್ತ 55 ಮತ್ತು ಶ್ರೇಢಿಯ ನಾಲ್ಕನೇ ಪದವು ಮೊದಲೆರಡು ಪದಗಳ ಮೊತ್ತಕ್ಕಿಂತ 5 ಹೆಚ್ಚಾಗಿದೆ. ಸಮಾಂತರ ಶ್ರೇಢಿಯ ಪದಗಳನ್ನು ಕಂಡುಹಿಡಿಯಿರಿ.**

**ಉತ್ತರ :** June : 2020

ಸಮಾಂತರ ಶ್ರೇಢಿಯ 5 ಪದಗಳು : a-2d, a-d, a, a+d ಮತ್ತು a+2d ಆಗಿರಲಿ.

ದತ್ತದ ಪ್ರಕಾರ, $a-2d + a-d + a + a+d + a+2d = 55$



$5a = 55$

$\mathbf{a = 11}$

ದತ್ತದ ಪ್ರಕಾರ, $a_4 = a_1 + a_2 + 5$

$a + d = a-2d + a - d + 5$

$a + d - a + 2d - a + d = 5$

$-a + 4d = 5$

$-11 + 4d = 5$

$4d = 5 + 11$

$d = \frac{16}{4}$

$\mathbf{d = 4}$

**∴ ಸಮಾಂತರ ಶ್ರೇಢಿ : a-2d, a-d, a, a+d , a+2d = 3, 7, 11, 15, 19.**

**6) ಒಂದು ಸಮಾಂತರ ಶ್ರೇಢಿಯಲ್ಲಿ 6 ನೇ ಪದವು 3 ನೇ ಪದದ ಎರಡರಷ್ಟಕ್ಕಿಂತ ಒಂದು ಹೆಚ್ಚಾಗಿದೆ. 4ನೇ ಮತ್ತು 5ನೇ ಪದಗಳ ಮೊತ್ತವು 2ನೇ ಪದದ ಐದರಷ್ಟಿದೆ. ಈ ಸಮಾಂತರ ಶ್ರೇಢಿಯ 10 ನೇ ಪದವನ್ನು ಕಂಡುಹಿಡಿಯಿರಿ.**

June : 2020

**ಉತ್ತರ** : ದತ್ತದ ಪ್ರಕಾರ,

$a_6 = 2a_3 + 1$

$a + 5d = 2(a + 2d) + 1$

$a + 5d = 2a + 4d + 1$

$a - 2a + 5d - 4d = 1$

$-a + d = 1$

$-a + d = 1$ x 3

$-3a + 3d = 3$ ------- (1)

ದತ್ತದ ಪ್ರಕಾರ,

$a_4 + a_5 = 5a_2$

$a + 3d + a + 4d = 5(a + d)$

$2a + 7d = 5a + 5d$

$2a - 5a + 7d - 5d = 0$

$-3a + 2d = 0$

$3a - 2d = 0$ -------- (2)

ಸಮೀಕರಣ (1) ಮತ್ತು (2) ನ್ನು ಬಿಡಿಸಿದಾಗ,

$3a - 2d = 0$

$-3a + 3d = 3$

$\mathbf{d = 3}$

$d = 3$ ನ್ನು ಸಮೀಕರಣ (1) ರಲ್ಲಿ ಆದೇಶಿಸಿದಾಗ,

$-a + d = 1$

$-a + 3 = 1$

$-a = 1-3$

$\mathbf{a = 2}$



Use E-Papers, Save Tress
Above line hide when print out

ಸಮಾಂತರ ಶ್ರೇಢಿಯ 10 ನೇ ಪದ :

$a_n = a + (n-1)d$

$a_{10} = a + 9d$

$a_{10} = 2 + 9x\ 3$

$a_{10} = 2 + 27$

**∴ $a_{10} = 29$**

**7) ಒಂದು ಸಮಾಂತರ ಶ್ರೇಢಿಯ ಮೊದಲ 7 ಪದಗಳ ಮೊತ್ತ 140 ಆಗಿದೆ. ಅದೇ ಶ್ರೇಢಿಯ ನಂತರದ 7 ಪದಗಳ ಮೊತ್ತವು 385 ಆದಾಗ ಆ ಸಮಾಂತರ ಶ್ರೇಢಿಯನ್ನು ಕಂಡುಹಿಡಿಯಿರಿ.** Model-1 : 2021

**ಉತ್ತರ** : ಸಮಾಂತರ ಶ್ರೇಢಿ : a , a+d, a+2d, .........

**ಮೊದಲ 7 ಪದಗಳ ಮೊತ್ತ :**

ಸೂತ್ರ : $S_n = \frac{n}{2}\{2a + (n-1)d\}$

$S_7 = \frac{7}{2}\{2a + (7-1)d\}$

$140 = \frac{7}{2}\{2a + 6d\}$

$140 = 7a + 21d \div 7$

$a + 3d = 20 \times 2$

$2a + 6d = 40$ ---------- (1)

14 ಪದಗಳ ಮೊತ್ತ = ಮೊದಲ 7 ಪದಗಳ ಮೊತ್ತ + ನಂತರದ 7 ಪದಗಳ ಮೊತ್ತ

14 ಪದಗಳ ಮೊತ್ತ = 140+385 = 525

$S_{14} = \frac{14}{2}\{2a + (14-1)d\} = 525$

$7\{2a + 13d\} = 525$

$2a + 13d = 75$ ------- (2)

ಸಮೀಕರಣ (2) ಮತ್ತು (1) ನ್ನು ಬಿಡಿಸಿದಾಗ,

$2a + 13d = 75$

$(-)2a +_{(-)} 6d =_{(-)} 40$

$7d = 35$

**d = 5**

d = 5 ನ್ನು ಸಮೀಕರಣ (1) ರಲ್ಲಿ ಆದೇಶಿಸಿದಾಗ,

$a + 3x5 = 20$

$a = 20 - 15$

**a = 5**

**∴ ಸಮಾಂತರ ಶ್ರೇಢಿ : a , a+d, a+2d = 5, 10, 15, ..........**

**8) ನಾಲ್ಕು ಕ್ರಮಾನುಗತ ಸಮಾಂತರ ಶ್ರೇಢಿಯ ಪದಗಳ ಮೊತ್ತ 32 ಹಾಗೂ ಮೊದಲ ಮತ್ತು ಕೊನೆಯ ಪದಗಳ ಗುಣಲಬ್ಧ ಮತ್ತು ಮಧ್ಯದ ಎರಡು ಪದಗಳ ಗುಣಲಬ್ಧಗಳ ಅನುಪಾತವು 7 : 15 ಆದರೆ ಆ ಸಂಖ್ಯೆಗಳನ್ನು ಕಂಡುಹಿಡಿಯಿರಿ.**

**ಉತ್ತರ :**



ಸಮಾಂತರ ಶ್ರೇಢಿಯ 4 ಪದಗಳು = a-3d, a - d, a+d, a+3d ಆಗಿರಲಿ

ಶ್ರೇಢಿಯ ಪದಗಳ ಮೊತ್ತ = 32

$a-3d+a-d+a+d+a+3d = 32$

$4a = 32 \Rightarrow$ **a = 8**

ಮೊದಲ ಮತ್ತು ಕೊನೆಯ ಪದಗಳ ಗುಣಲಬ್ಧ ಮತ್ತು ಮಧ್ಯದ ಎರಡು ಪದಗಳ ಗುಣಲಬ್ಧಗಳ ಅನುಪಾತ = 7 : 15

$(a-3d) \times (a+3d) : (a-d)(a+d) = 7 : 15$

$\frac{a^2-9d^2}{a^2-d^2} = \frac{7}{15}$

$15a^2 - 135d^2 = 7a^2 - 7d^2$

$15a^2 - 7a^2 - 135d^2 + 7d^2 = 0$

$8a^2 - 128d^2 = 0 \Rightarrow 8x8^2 - 128d^2 = 0 \Rightarrow 128d^2 = 512 \Rightarrow d^2 = 4 \Rightarrow$ **d = 2**

∴ ಸಮಾಂತರ ಶ್ರೇಢಿ : a-3d, a - d, a+d, a+3d

= 8-3x2, 8-2, 8+2, 8+3x2

**= 2, 6, 10, 14**

**9) 50 ಪದಗಳಿರುವ ಒಂದು ಸಮಾಂತರ ಶ್ರೇಢಿಯ ಮೊದಲ 10 ಪದಗಳ ಮೊತ್ತ 210 ಮತ್ತು ಅದರ ಕೊನೆಯ 15 ಪದಗಳ ಮೊತ್ತವು 2565 ಆದರೆ ಸಮಾಂತರ ಶ್ರೇಢಿಯನ್ನು ಕಂಡುಹಿಡಿಯಿರಿ.**

**ಉತ್ತರ** : ಸೂತ್ರ : $S_n = \frac{n}{2}\{2a + (n-1)d\}$

ಮೊದಲ 10 ಪದಗಳ ಮೊತ್ತ = 210

$S_{10} = \frac{10}{2}\{2a + (10-1)d\} = 210 \Rightarrow \{2a + 9d\} = 42$ ------------(1)

ಕೊನೆಯ 15 ಪದಗಳ ಮೊತ್ತ = 2565 $\Rightarrow S_{50} - S_{35} = 2565$

$\frac{50}{2}\{2a + 49d\} - \frac{35}{2}\{2a + 34d\} = 2565$

$50(2a + 49d) - 35(2a+34d) = 2565x2$

$100a + 2450d - 70a - 1190d = 5130$

$30a + 1260d = 5130 \div 15$

$2a + 84d = 342$ -------------- (2)

ಸಮೀಕರಣ (1) ಮತ್ತು (2) ನ್ನು ಬಿಡಿಸಿದಾಗ

$2a + 84d = 342$

$(-)2a +_{(-)} 9d =_{(-)} 42$

$75d = 300$

**d = 4**

d = 4 ನ್ನು ಸಮೀಕರಣ (1) ರಲ್ಲಿ ಆದೇಶಿಸಿದಾಗ,

$2a + 9x4 = 42$

$2a = 42-36 = 8$

**a = 4**

**∴ ಸಮಾಂತರ ಶ್ರೇಢಿ : a , a+d, a+2d = 4, 8, 12, .........**



Use E-Papers, Save Trees
Above line hide when print out

10) ಒಂದು ಸಮಾಂತರ ಶ್ರೇಢಿಯ p ನೇ, q ನೇ ಮತ್ತು r ನೇ ಪದಗಳು ಕ್ರಮವಾಗಿ a,b ಮತ್ತು c ಗಳಾಗಿವೆ. **a(q-r) + b(r-p) + c(p-q) = 0** ಎಂದು ಸಾಧಿಸಿ. MODEL-1 : 2019-20

ಉತ್ತರ : $a_p = a,\ a_q = b,\ a_r = c$

ಸೂತ್ರ : $a_n = a + (n-1)d$

$a_p = a + (p-1)d = a$

$a_q = a + (q-1)d = b$

$a_r = a + (r-1)d = c$

$a(q-r) + b(r-p) + c(p-q)$

$= \{a + (p-1)d\}(q-r) + \{a + (q-1)d\}(r-p) + \{a + (r-1)d\}(p-q)$

$= \{a + pd - d\}(q-r) + \{a + qd - d\}(r-p) + \{a + rd - d\}(p-q)$

$= \{aq + pqd - qd - ar - prd + dr + ar + qrd - dr - ap - pqd + pd + ap + prd - pd - aq - qrd + qd\}$

$= 0$

$\therefore$ **a(q-r) + b(r-p) + c(p-q) = 0**

**ಅಥವಾ**

$a_p = a,\ a_q = b,\ a_r = c,$

$d = \frac{a_q - a_p}{q-p} = \frac{b-a}{q-p}$ ------- (1)

$d = \frac{a_r - a_q}{r-q} = \frac{c-b}{r-q}$ ------- (2)

ಸಮೀಕರಣ (1) ಮತ್ತು (2) ರಿಂದ,

$\frac{b-a}{q-p} = \frac{c-b}{r-q}$

$(b-a)(r-q) = (c-b)(q-p)$

$br - bq - ar + aq = cq - cp - bq + bp$

$aq - ar + br - bp + cp - cq = 0$

$\therefore$ **a(q-r) + b(r-p) + c(p-q) = 0**

11) ಒಂದು ಸಮಾಂತರ ಶ್ರೇಢಿಯ m ಮತ್ತು n ಪದಗಳ ಮೊತ್ತಗಳ ಅನುಪಾತ $m^2 : n^2$ ಆಗಿದೆ. ಹಾಗಾದರೆ m ಮತ್ತು n ಪದಗಳ ಅನುಪಾತ **(2m - 1) : (2n - 1)** ಎಂದು ತೋರಿಸಿ. Prep : 2020

ಉತ್ತರ : ಸೂತ್ರ : $S_n = \frac{n}{2}\{2a + (n-1)d\}$

$S_m = \frac{m}{2}\{2a + (m-1)d\}$

$\frac{S_m}{S_n} = \frac{\frac{m}{2}\{2a+(m-1)d\}}{\frac{n}{2}\{2a+(n-1)d\}}$

$\frac{S_m}{S_n} = \frac{m\{2a+(m-1)d\}}{n\{2a+(n-1)d\}} = \frac{m^2}{n^2}$

$\frac{\{2a+(m-1)d\}}{\{2a+(n-1)d\}} = \frac{m}{n}$

$2an + mnd - nd = 2am + mnd - md$

$2an - nd = 2am - md$

$2an - 2am = nd - md$

$2a(n-m) = d(n-m)$

**d = 2a --------(1)**

$a_n = a + (n-1)d$

$a_m = a + (m-1)d$

$\frac{a_m}{a_n} = \frac{a+(m-1)d}{a+(n-1)d}$

$\frac{a_m}{a_n} = \frac{a+(m-1)2a}{a+(n-1)2a}$ $[\because d = 2a]$

$\frac{a_m}{a_n} = \frac{a+2am-2a}{a+2an-2a}$

$\frac{a_m}{a_n} = \frac{2am-a}{2an-a}$

$\frac{a_m}{a_n} = \frac{a(2m-1)}{a(2n-1)}$

$\frac{a_m}{a_n} = \frac{(2m-1)}{(2n-1)}$

$\therefore$ **m ಮತ್ತು n ಪದಗಳ ಅನುಪಾತ = (2m - 1) : (2n - 1)**

## ಅಭ್ಯಾಸ ಪ್ರಶ್ನೆಗಳು :

1) ಒಂದು ಸಮಾಂತರ ಶ್ರೇಢಿಯ 5 ನೇ ಮತ್ತು 9 ನೇ ಪದಗಳ ಮೊತ್ತ 40 ಹಾಗೂ 8ನೇ ಮತ್ತು 14 ನೇ ಪದಗಳ ಮೊತ್ತವು 64 ಆದರೆ ಆ ಶ್ರೇಢಿಯ ಮೊದಲ 20 ಪದಗಳ ಮೊತ್ತ ಕಂಡುಹಿಡಿಯಿರಿ.
ಉತ್ತರ : d = 3, a = 2, $\therefore S_{20} = 610$ Model-2 : 2020

2) ಒಂದು ಸಮಾಂತರ ಶ್ರೇಢಿಯಲ್ಲಿ 37 ಪದಗಳಿವೆ. ಅದರ ಮೊದಲ 3 ಪದಗಳ ಮೊತ್ತವು 12 ಮತ್ತು ಶ್ರೇಢಿಯ ಕೊನೆಯ ಮೂರು ಪದಗಳ ಮೊತ್ತ 318 ಆದರೆ ಶ್ರೇಢಿಯ ಮೊದಲ ಪದ ಮತ್ತು ಕೊನೆಯ ಪದಗಳನ್ನು ಕಂಡುಹಿಡಿಯಿರಿ. ಉತ್ತರ : d = 3, a = 1, $a_{37} = 109$ Model-1 : 2021

3) ಒಂದು ಸಮಾಂತರ ಶ್ರೇಢಿಯಲ್ಲಿ ಮೂರನೇ ಪದವು 8. ಒಂಭತ್ತನೇ ಪದವು ಮೂರನೇ ಪದದ ಮೂರರಷ್ಟಕ್ಕಿಂತ 2 ಹೆಚ್ಚು ಇದೆ. ಹಾಗಾದರೆ ಮೊದಲ 19 ಪದಗಳ ಮೊತ್ತವನ್ನು ಕಂಡುಹಿಡಿಯಿರಿ. Prep : 2019 & Model-2 : 2021
ಉತ್ತರ : d = 3, a = 2, $S_{19} = 551$

4) ಒಂದು ಸಮಾಂತರ ಶ್ರೇಢಿಯಲ್ಲಿ ಮೊದಲ 8 ಪದಗಳ ಮೊತ್ತ 100 ಹಾಗೂ ಮೊದಲ 19 ಪದಗಳ ಮೊತ್ತ 551. ಹಾಗಾದರೆ ಆ ಶ್ರೇಢಿಯನ್ನು ಕಂಡುಹಿಡಿಯಿರಿ. ಉತ್ತರ : ಸಮಾಂತರ ಶ್ರೇಢಿ : 2, 5, 8, ...... Prep : 2019

5) ಸಮಾಂತರ ಶ್ರೇಢಿಯ 14ನೇ ಪದವು 8ನೇ ಪದದ ಎರಡರಷ್ಟಿದೆ. 6 ನೇ ಪದವು –8 ಆದರೆ ಮೊದಲ 20 ಪದಗಳ ಮೊತ್ತ ಕಂಡುಹಿಡಿಯಿರಿ. ಉತ್ತರ : d = -2, $a = 2$ $\therefore S_{20} = -340$

6) ಒಂದು ಸಮಾಂತರ ಶ್ರೇಢಿಯ ಮೂರು ಪದಗಳ ಮೊತ್ತ 24 ಮತ್ತು ಅವುಗಳ ಗುಣಲಬ್ಧವು 480 ಆದಾಗ, ಆ ಸಮಾಂತರ ಶ್ರೇಢಿಯ ಮೂರು ಪದಗಳನ್ನು ಬರೆಯಿರಿ. Model-2 : 2021
ಉತ್ತರ : a = 8, d = 2 ಸಮಾಂತರ ಶ್ರೇಢಿ : 6, 8, 10, .........

7) ಒಂದು ಸಮಾಂತರ ಶ್ರೇಢಿಯಲ್ಲಿ ಮೊದಲ ಪದ 5, ಕೊನೆಯ ಪದ 45 ಮತ್ತು ಮೊತ್ತ 400 ಆದರೆ ಅದರ ಪದಗಳ ಸಂಖ್ಯೆ ಮತ್ತು ಸಾಮಾನ್ಯ ವ್ಯತ್ಯಾಸ ಕಂಡುಹಿಡಿಯಿರಿ. ಉತ್ತರ : n = 16, $d = \frac{8}{3}$

8) ಒಂದು ಸಮಾಂತರ ಶ್ರೇಢಿಯಲ್ಲಿ 7ರ ಪಟ್ಟು 7ನೇ ಪದವು, 11ರ ಪಟ್ಟು 11ನೇ ಪದಕ್ಕೆ ಸಮನಾಗಿರುತ್ತದೆ. 18ನೇ ಪದವನ್ನು ಕಂಡುಹಿಡಿಯಿರಿ. ಉತ್ತರ : $a_{18} = 0$

9) ಒಂದು ಸಮಾಂತರ ಶ್ರೇಢಿಯಲ್ಲಿ $a_n = 10 - 3n$ ಆದರೆ $S_{40}$ ಕಂಡುಹಿಡಿಯಿರಿ. ಉತ್ತರ : $S_{40} = -2060$

10) n ನಯಾವ ಬೆಲೆಗೆ 63,65,67, .......... ಮತ್ತು 3,10,17,............. ಈ ಸಮಾಂತರ ಶ್ರೇಢಿಗಳ n ನೇ ಪದಗಳು ಸಮನಾಗಿರುತ್ತವೆ? ಉತ್ತರ : n = 13


Use E-Papers, Save Trees
Above line hide when print out

## ಐದು ಅಂಕದ ಪ್ರಶ್ನೆಗಳು :

**1) ಸಾಮಾನ್ಯ ವ್ಯತ್ಯಾಸವು ಸಮನಾಗಿರುವ ಎರಡು ವಿಭಿನ್ನ ಸಮಾಂತರ ಶ್ರೇಢಿಗಳಲ್ಲಿ ಮೊದಲನೇ ಶ್ರೇಢಿಯ ಮೊದಲನೇ ಪದವು ಎರಡನೇ ಶ್ರೇಢಿಯ ಮೊದಲನೇ ಪದಕ್ಕಿಂತ 3 ಹೆಚ್ಚಾಗಿದೆ. ಮೊದಲನೇ ಶ್ರೇಢಿಯ 7 ನೇ ಪದವು 28 ಮತ್ತು ಎರಡನೇ ಶ್ರೇಢಿಯ 8 ನೇ ಪದವು 29 ಆದಾಗ ಆ ಎರಡು ವಿಭಿನ್ನ ಸಮಾಂತರ ಶ್ರೇಢಿಗಳನ್ನು ಕಂಡುಹಿಡಿಯಿರಿ.** SEPT : 2020

**ಉತ್ತರ** : ಮೊದಲನೇ ಸಮಾಂತರ ಶ್ರೇಢಿ : a, a+d, a+2d, .......

ಎರಡನೇ ಸಮಾಂತರ ಶ್ರೇಢಿ : b, b+d, b+2d, .......

ದತ್ತದ ಪ್ರಕಾರ, $a = b + 3$ --------- (1)

$a_7 = 28$

$a + 6d = 28$ ----------------- (2)

$b_8 = 29$

$b + 7d = 29$ ---------------- (3)

ಸಮೀಕರಣ (1) ನ್ನು (2) ರಲ್ಲಿ ಆದೇಶಿದಾಗ

$a + 6d = 28$

$b + 3 + 6d = 28$

$b + 6d = 28 - 3$

$b + 6d = 25$ ---------------- (4)

ಸಮೀಕರಣ (3) ಮತ್ತು (4) ಬಿಡಿಸಿದಾಗ

$b + 7d = 29$

$_{(-)}b +_{(-)}6d =_{(-)}25$

$\mathbf{d = 4}$

d = 4 ನ್ನು ಸಮೀಕರಣ (2) ರಲ್ಲಿ ಆದೇಶಿದಾಗ

$a + 6d = 28$

$a + 6x4 = 28$

$a + 24 = 28$

$a = 28 - 24$

$\mathbf{a = 4}$

d = 4 ನ್ನು ಸಮೀಕರಣ (3) ರಲ್ಲಿ ಆದೇಶಿದಾಗ,

$b + 7d = 29$

$b + 7x4 = 29$

$b + 28 = 29$

$b = 29 - 28$

$\mathbf{b = 1}$

**∴ ಮೊದಲನೇ ಸಮಾಂತರ ಶ್ರೇಢಿ : a, a+d, a+2d, ....... = 4, 4+4, 4+2(4) = 4, 8, 12, .......**

**ಎರಡನೇ ಸಮಾಂತರ ಶ್ರೇಢಿ : b, b+d, b+2d, ....... = 1, 1+4, 1+2(4) = 1, 5, 9, ........**



# ಅಧ್ಯಾಯ–2 : ತ್ರಿಭುಜಗಳು:

**ಸಮರೂಪ ಆಕೃತಿಗಳು :** ಬಾಹುಗಳ ಸಂಖ್ಯೆ ಒಂದೇ ಇರುವ ಎರಡು ಬಹುಭುಜಾಕೃತಿಗಳು ಸಮರೂಪಿಗಳಾಗಬೇಕಾದರೆ

* ಅವುಗಳ ಅನುರೂಪ ಕೋನಗಳು ಸಮವಾಗಿರಬೇಕು.
* ಬಾಹುಗಳ ಅನುಪಾತ ಸಮವಾಗಿರಬೇಕು.

ಎರಡು ತ್ರಿಭುಜಗಳು ಸಮರೂಪವಾಗಬೇಕಾದರೆ

* ಅವುಗಳ ಅನುರೂಪ ಕೋನಗಳು ಸಮವಾಗಿರಬೇಕು.
* ಅವುಗಳ ಅನುರೂಪ ಬಾಹುಗಳ ಅನುಪಾತ ಸಮವಾಗಿರಬೇಕು.

**ಮೂಲಸಮಾನುಪಾತತೆಯ ಪ್ರಮೇಯ : (ಥೇಲ್ಸ್ ಪ್ರಮೇಯ)**

"ತ್ರಿಭುಜದ ಎರಡು ಬಾಹುಗಳನ್ನು ಎರಡು ವಿಭಿನ್ನ ಬಿಂದುಗಳಲ್ಲಿ ಛೇದಿಸುವಂತೆ ಒಂದು ಬಾಹುವಿಗೆ ಸಮಾಂತರವಾಗಿ ಎಳೆದ ಸರಳರೇಖೆಯು ಉಳಿದೆರಡು ಬಾಹುಗಳನ್ನು ಸಮಾನುಪಾತದಲ್ಲಿ ವಿಭಾಗಿಸುತ್ತದೆ".

**ಥೇಲ್ಸ್ ವಿಲೋಮ ಪ್ರಮೇಯ :**

" ತ್ರಿಭುಜದ ಯಾವುದಾದರೂ ಎರಡು ಬಾಹುಗಳನ್ನು ಸಮಾನುಪಾತದಲ್ಲಿ ವಿಭಾಗಿಸುವ ರೇಖೆಯು ಅದರ ಮೂರನೇ ಬಾಹುವಿಗೆ ಸಮಾಂತರವಾಗಿರುತ್ತದೆ"

$\Delta ABC$ಯಲ್ಲಿ, DE ∥ BC ಆದರೆ, ಆಗ ಥೇಲ್ಸ್ ಪ್ರಮೇಯದ ಪ್ರಕಾರ,




$\frac{AD}{DB} = \frac{AE}{EC}$

ಥೇಲ್ಸ್ ಉಪಪ್ರಮೇಯದ ಪ್ರಕಾರ,

$\frac{AD}{AB} = \frac{AE}{AC} = \frac{DE}{BC}$

**ತ್ರಿಭುಜಗಳ ಸಮರೂಪತೆಯ ನಿರ್ಧಾರಕ ಗುಣಗಳು :**

**ಕೋನ–ಕೋನ–ಕೋನ ನಿರ್ಧಾರಕ ಗುಣ :**

"ಎರಡು ತ್ರಿಭುಜಗಳಲ್ಲಿ ಅನುರೂಪ ಕೋನಗಳು ಸಮವಾದರೆ ಅವುಗಳ ಅನುರೂಪ ಬಾಹುಗಳು ಸಮಾನುಪಾತದಲ್ಲಿರುತ್ತವೆ. ಆದ್ದರಿಂದ ಆ ತ್ರಿಭುಜಗಳು ಸಮರೂಪವಾಗಿರುತ್ತವೆ"

**ಬಾಹು–ಬಾಹು–ಬಾಹು ನಿರ್ಧಾರಕ ಗುಣ :**

"ಎರಡು ತ್ರಿಭುಜಗಳಲ್ಲಿ ಒಂದು ತ್ರಿಭುಜದ ಮೂರು ಬಾಹುಗಳು ಮತ್ತೊಂದು ತ್ರಿಭುಜದ ಮೂರು ಬಾಹುಗಳೊಡನೆ ಸಮಾನುಪಾತ ಹೊಂದಿದ್ದರೆ ಅವುಗಳ ಅನುರೂಪ ಕೋನಗಳು ಸಮನಾಗಿರುತ್ತವೆ. ಆದ್ದರಿಂದ ಆ ತ್ರಿಭುಜಗಳು ಸಮರೂಪವಾಗಿರುತ್ತವೆ"

**ಬಾಹು–ಕೋನ–ಬಾಹು ನಿರ್ಧಾರಕ ಗುಣ :**

"ತ್ರಿಭುಜದ ಒಂದು ಕೋನವು ಮತ್ತೊಂದು ತ್ರಿಭುಜದ ಒಂದು ಕೋನಕ್ಕೆ ಸಮನಾಗಿದ್ದು ಆ ಕೋನಗಳನ್ನು ಉಂಟುಮಾಡಿರುವ ಬಾಹುಗಳು ಸಮಾನುಪಾತದಲ್ಲಿದ್ದರೆ, ಆಗ ಎರಡು ತ್ರಿಭುಜಗಳು ಸಮರೂಪಿಗಳಾಗಿರುತ್ತವೆ"

**ಲಂ.ವಿ.ಬಾ. ನಿರ್ಧಾರಕ ಗುಣ :**

"ಎರಡು ಲಂಬಕೋನ ತ್ರಿಭುಜಗಳಲ್ಲಿ ಒಂದರ ವಿಕರ್ಣ ಮತ್ತು ಒಂದು ಬಾಹುವು ಮತ್ತು ಮತ್ತೊಂದರ ವಿಕರ್ಣ ಮತ್ತು ಅದರ ಅನುರೂಪ ಬಾಹುವು ಪರಸ್ಪರ ಸಮಾನುಪಾತ ಹೊಂದಿದ್ದರೆ, ಆ ಎರಡು ತ್ರಿಭುಜಗಳು ಸಮರೂಪಿಗಳಾಗಿರುತ್ತವೆ"

**ತ್ರಿಭುಜಗಳ ವಿಸ್ತೀರ್ಣಗಳ ಪ್ರಮೇಯ :**

"ಎರಡು ಸಮರೂಪ ತ್ರಿಭುಜಗಳ ವಿಸ್ತೀರ್ಣಗಳ ಅನುಪಾತವು ಅವುಗಳ ಅನುರೂಪ ಬಾಹುಗಳ ವರ್ಗಗಳ ಅನುಪಾತಕ್ಕೆ ಸಮನಾಗಿರುತ್ತವೆ"



Use E-Papers, Save Trees
Above line hide when print out

**ಪೈಥಾಗೊರಸ್ ಪ್ರಮೇಯ :**

"ಒಂದು ಲಂಬಕೋನ ತ್ರಿಭುಜದಲ್ಲಿ ವಿಕರ್ಣದ ಮೇಲಿನ ವರ್ಗವು ಉಳಿದೆರಡು ಬಾಹುಗಳ ವರ್ಗಗಳ ಮೊತ್ತಕ್ಕೆ ಸಮನಾಗಿರುತ್ತದೆ"

$\Delta ABC$ ಯಲ್ಲಿ, $\angle B = 90^0$ ಆದರೆ

$AC^2 = AB^2 + BC^2$




**ಪೈಥಾಗೊರಸ್ ವಿಲೋಮ ಪ್ರಮೇಯ :**

"ಒಂದು ತ್ರಿಭುಜದಲ್ಲಿ ಅತ್ಯಂತ ದೊಡ್ಡಬಾಹುವಿನ ಮೇಲಿನ ವರ್ಗವು ಉಳಿದೆರಡು ಬಾಹುಗಳ ವರ್ಗಗಳ ಮೊತ್ತಕ್ಕೆ ಸಮನಾದರೆ ಆ ಎರಡು ಬಾಹುಗಳ ನಡುವೆ ಲಂಬಕೋನ ಏರ್ಪಡುತ್ತದೆ"

## ಬಹು ಆಯ್ಕೆ ಪ್ರಶ್ನೆಗಳು :

**1) ಈ ಕೆಳಗಿನ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆ.** Model-2:2021

A. ಎರಡು ಸಮರೂಪಿಯ ತ್ರಿಭುಜಗಳು ಯಾವಾಗಲೂ ಸರ್ವಸಮವಾಗಿರುತ್ತದೆ.

B. ಒಂದು ವರ್ಗವು ಮತ್ತು ಒಂದು ಆಯತವು ಯಾವಾಗಲೂ ಸಮರೂಪಿಯಾಗಿರುತ್ತದೆ.

C. ಎರಡು ಸಮಕೋನೀಯ ತ್ರಿಭುಜಗಳು ಯಾವಾಗಲೂ ಸಮರೂಪಿಯಾಗಿರುತ್ತದೆ.

D. ಒಂದು ವಜ್ರಾಕೃತಿ ಮತ್ತು ಒಂದು ವರ್ಗವು ಯಾವಾಗಲೂ ಸಮರೂಪಿಯಾಗಿರುತ್ತದೆ

**2) ಈ ಕೆಳಗಿನ ಯಾವ ತ್ರಿಭುಜಗಳ ಜೋಡಿಗಳು ಯಾವಾಗಲೂ ಸಮರೂಪವಾಗಿರುತ್ತದೆ.** Model : 2022

A) ಎರಡು ಸಮದ್ವಿಬಾಹು ತ್ರಿಭುಜಗಳು B) ಎರಡು ಅಸಮಬಾಹು ತ್ರಿಭುಜಗಳು

C) ಎರಡು ಸಮಬಾಹು ತ್ರಿಭುಜಗಳು D) ಎರಡು ಲಂಕೋನ ತ್ರಿಭುಜಗಳು

**3) ಕೊಟ್ಟಿರುವ ಚಿತ್ರದಲ್ಲಿ $ST \parallel QR$ ಆಗಿದ್ದು $\frac{PS}{SQ}$ ಗೆ ಸಮನಾದದ್ದು** Model-2:2021

A) $\frac{PT}{TR}$ B) $\frac{PS}{TR}$ C) $\frac{PT}{SQ}$ D) $\frac{PT}{SR}$




**4) $\Delta ABC$ ಯಲ್ಲಿ $XY \parallel BC$ ಆದಾಗ** July : 2021

(A) $\frac{AX}{AB} = \frac{AC}{AY}$ (B) $\frac{AX}{BX} = \frac{AY}{CY}$

(C) $\frac{AX}{BX} = \frac{XY}{AY}$ (D) $\frac{AB}{BX} = \frac{AC}{AY}$




**5) $\Delta ABC$ ಯಲ್ಲಿ $DE \parallel BC$, $DE = 5$ ಸೆಂ.ಮೀ., $BC = 8$ ಸೆಂ.ಮೀ., ಮತ್ತು $AD = 3.5$ ಸೆಂ.ಮೀ.ಗಳಾದರೆ $AB$ ಯ ಉದ್ದವು** MODEL-2019

A ) 5.6cm B) 4.8cm c) 5.2cm D) 6.4cm






**6) ಚಿತ್ರದಲ್ಲಿ $\Delta POQ \sim \Delta SOR$ ಮತ್ತು $PQ : RS = 1 : 2$ ಆದರೆ, $OP : OS$** June -2020

A ) 1 : 2 B) 2 : 1 C) 3 : 1 D) 1 : 3




**7) $\Delta ABC$ ಯಲ್ಲಿ $DE \parallel AC$ಆಗಿದ್ದು, ಇವುಗಳಲ್ಲಿ ಸರಿಯಾದ ಸಂಬಂಧವು** Sept-2020

A) $\frac{BD}{AB} = \frac{AC}{DE} = \frac{BC}{BE}$ B) $\frac{BD}{AB} = \frac{DE}{AC} = \frac{BE}{BC}$

C) $\frac{AB}{BD} = \frac{AC}{DE} = \frac{BE}{EC}$ D) $\frac{AD}{BD} = \frac{DE}{AC} = \frac{BE}{EC}$




**8) ಕೊಟ್ಟಿರುವ ಚಿತ್ರದಲ್ಲಿ $\Delta ABC \sim \Delta DEF$ ಮತ್ತು $\angle ABC = \angle DEF = 60^0$ ಆದಾಗ AC ಯ ಉದ್ದವು**




A. 2.4 cm B. 2.6 cm C. 3.9 cm D. 3.2 cm Model-1:2021

**9) $\Delta ABC$ ಯಲ್ಲಿ $DE \parallel BC$ ಆಗಿದೆ. ಈ ಕೆಳಗಿನವುಗಳಲ್ಲಿ ಸರಿಯಾದ ಸಂಬಂಧವು** Model-1:2021

A. $\frac{AC}{AD} = \frac{EC}{BD}$ B. $\frac{AD}{DE} = \frac{AE}{BC}$ C. $\frac{AD}{AB} = \frac{AE}{AC}$ D. $\frac{AB}{BC} = \frac{AE}{BD}$

**10) ಕೊಟ್ಟಿರುವ ಎರಡು ತ್ರಿಭುಜಗಳನ್ನು ಗಮನಿಸಿ, ನಂತರ DF ಅಳತೆಯನ್ನು ಗುರುತಿಸಿ.** Model-1:2021




A) $6\sqrt{2}$ cm B) $3\sqrt{2}$ cm C) 4.2 cm D) 8.4 cm

**11) ಎರಡು ಸಮರೂಪ ತ್ರಿಭುಜಗಳ ಅನುರೂಪ ಬಾಹುಗಳ ಅನುಪಾತ 1 : 4 ಆದರೆ, ಅವುಗಳ ವಿಸ್ತೀರ್ಣಗಳ ಅನುಪಾತ** July : 2021

A) 1 : 2 B) 1 : 16 C) 1 : 4 D) 16 : 1



Use E-Papers, Save Tress
Above line hide when print out

12) ΔADE ~ ΔABC ಆಗಿದೆ. AD = 1 cm ಮತ್ತು AB = 2cm ಆದಾಗ,

ΔABC ವಿಸ್ತೀರ್ಣ : ΔADE ವಿಸ್ತೀರ್ಣವು  Prep : 2022

A) 4 : 1  B) 1 : 4  C) 1 : 2  D) 2 : 1




13) ΔABC ಯಲ್ಲಿ, DE || BC ಮತ್ತು AB : AD = 5 : 3

ಆದರೆ ΔABC ವಿಸ್ತೀರ್ಣ : ΔADE ವಿಸ್ತೀರ್ಣವು

A. 3 : 5  B. 6 : 10  C. 9 : 25  D. 25 : 9  Model-1:2021

14) ΔABC ~ ΔPQR ಮತ್ತು ಅವುಗಳ ವಿಸ್ತೀರ್ಣಗಳ ಅನುಪಾತ 25 : 9 ಆಗಿದೆ. BC = 5cm, ಆದರೆ QR ನ ಉದ್ದವು  Model-2:2021

A. 8 cm  B. 3 cm  C. 3.5 cm  D. 9 cm

15) ΔABC ~ ΔPQR, ΔABCದ ವಿಸ್ತೀರ್ಣ = 64cm$^2$ ಮತ್ತು ΔPQRದ ವಿಸ್ತೀರ್ಣ = 100 cm$^2$ ಆಗಿದೆ. AB = 8 cm ಆದಾಗ PQ ನ ಉದ್ದವು  July : 2021

A) 12 cm  B) 15 cm  C) 10 cm  D) 8 cm

16) ಕೊಟ್ಟಿರುವ ಚಿತ್ರದಲ್ಲಿ ∠ABC= 90$^0$ , BD ⊥ AC, AB= 6cm, BC= 8cm ಮತ್ತು CA=10cm ಆದಾಗ AD ಯ ಉದ್ದವು




A. 6.3 cm  B. 3.6 cm

C. 3 cm  D. 4 cm

17) ಈ ಕೆಳಗೆ ಕೆಲವು ತ್ರಿಭುಜಗಳ ಬಾಹುಗಳ ಅಳತೆಗಳನ್ನು ನೀಡಲಾಗಿದೆ. ಇವುಗಳಲ್ಲಿ "ಲಂಬಕೋನ ತ್ರಿಭುಜವಲ್ಲದ" ಇರುವ ತ್ರಿಭುಜದ ಬಾಹುಗಳನ್ನು ಗುರುತಿಸಿ.  Model-2:2021

A. 5cm, 12cm, 13cm  B. 8cm, 15cm, 17cm

C. 3cm, 8cm, 6cm  D. 7cm, 24cm, 25cm

18) ಕೊಟ್ಟಿರುವ ಚಿತ್ರದಲ್ಲಿ ∠B = 90$^0$ , ಮತ್ತು AB = BC = 2cm, ಆದರೆ AC ಯ ಉದ್ದವು  Model-2:2021




A. 2√2cm  B. 4√3 cm  C. 2 cm  D. 4 cm

19) ಒಂದು ತ್ರಿಭುಜದ ಮೂರು ಕೋನಗಳ ಅನುಪಾತ 1:2:3 ಆದರೆ, ಆ ತ್ರಿಭುಜವು  Model-2:2021

A. ಸಮಬಾಹು ತ್ರಿಭುಜವಾಗಿರುತ್ತದೆ.  B. ಲಂಬಕೋನ ತ್ರಿಭುಜವಾಗಿರುತ್ತದೆ.

C. ಸಮದ್ವಿಬಾಹು ತ್ರಿಭುಜವಾಗಿರುತ್ತದೆ.  D. ವಿಶಾಲಕೋನ ತ್ರಿಭುಜವಾಗಿರುತ್ತದೆ.

20) Δ ABC ಯಲ್ಲಿ, ∟B = 90$^0$ ಮತ್ತು BD ⊥ AC. AB = 6 cm, BC = 8 cm ಆದಾಗ, CD ಯ ಉದ್ದವು  July : 2021




A) 10 cm  B) 6.4 cm  C) 4.8 cm  D) 3.6 cm



21) ΔABC ಯಲ್ಲಿ, $\frac{AB}{AC} = \frac{BD}{CD}$ ಆಗಿದೆ ಮತ್ತು ∠B = 70$^0$ ಹಾಗೂ ∠C= 50$^0$ ಆದಾಗ ∠BAD ಅಳತೆ  Model-1:2021

A. 30$^0$  B. 40$^0$

C. 45$^0$  D. 50$^0$




**ಉತ್ತರಗಳು** : 1.C, 2.C, 3.A, 4.B, 5.A, 6.A, 7.B, 8.B, 9.C, 10.A, 11.B, 12.A, 13.D, 14.B, 15.C, 16.B, 17.C, 18.A, 19.B, 20.B, 21.A

## ಒಂದು ಅಂಕದ ಪ್ರಶ್ನೆಗಳು :

1) "ಮೂಲ ಸಮಾನುಪಾತತೆಯ ಪ್ರಮೇಯ"ವನ್ನು ನಿರೂಪಿಸಿ.

June : 2020 & Model-1:2021 & April : 2022 Prep : 2022 , June : 2022

**ಥೇಲ್ಸ್ ಪ್ರಮೇಯ** : "ತ್ರಿಭುಜದ ಎರಡು ಬಾಹುಗಳನ್ನು ಎರಡು ವಿಭಿನ್ನ ಬಿಂದುಗಳಲ್ಲಿ ಛೇದಿಸುವಂತೆ ಒಂದು ಬಾಹುವಿಗೆ ಸಮಾಂತರವಾಗಿ ಎಳೆದ ಸರಳರೇಖೆಯು ಉಳಿದೆರಡು ಬಾಹುಗಳನ್ನು ಸಮಾನುಪಾತದಲ್ಲಿ ವಿಭಾಗಿಸುತ್ತದೆ"

2) 'ಪೈಥಾಗೊರಸ್ ಪ್ರಮೇಯ'ದ ಹೇಳಿಕೆಯನ್ನು ಬರೆಯಿರಿ.  Model : 2022

**ಉತ್ತರ** : " ಒಂದು ಲಂಬಕೋನ ತ್ರಿಭುಜದಲ್ಲಿ ವಿಕರ್ಣದ ಮೇಲಿನ ವರ್ಗವು ಉಳಿದೆರಡು ಬಾಹುಗಳ ವರ್ಗಗಳ ಮೊತ್ತಕ್ಕೆ ಸಮವಾಗಿರುತ್ತದೆ"

3) ಚಿತ್ರದಲ್ಲಿ DE || BC , AE = 3ಸೆಂ.ಮೀ., CE = 6ಸೆಂ.ಮೀ. ಮತ್ತು AD = 4ಸೆಂ.ಮೀ. ಆದರೆ, ABಯನ್ನು ಕಂಡುಹಿಡಿಯಿರಿ.




**ಉತ್ತರ** : $\frac{AB}{AD} = \frac{AC}{AE}$  Prep : 2020

$\frac{AB}{4} = \frac{9}{3}$

$AB = \frac{4x9}{3} = \frac{36}{3} =$ **12ಸೆಂ.ಮೀ.**

4) ಕೊಟ್ಟಿರುವ ಚಿತ್ರದಲ್ಲಿ AB || DE , AD = 6 ಸೆಂ.ಮೀ., CD = 4 ಸೆಂ.ಮೀ. ಮತ್ತು BC = 15 ಸೆಂ.ಮೀ. ಆದರೆ, BE ಯನ್ನು ಕಂಡುಹಿಡಿಯಿರಿ.




**ಉತ್ತರ** : BE = x ಆಗಿರಲಿ

$\frac{CD}{AC} = \frac{CE}{BC}$ (∵ ಸಮರೂಪತೆಯ ಪ್ರಮೇಯ )

$\frac{4}{10} = \frac{15-B}{15}$

$15-BE = \frac{15x4}{10}$

BE = 15 - 6

**BE = 9 ಸೆಂ.ಮೀ .**



Use E-Papers, Save Trees
Above line hide when print out

# ಎರಡು ಅಂಕದ ಪ್ರಶ್ನೆಗಳು :

**1) ಕೊಟ್ಟಿರುವ ಚಿತ್ರದಲ್ಲಿ $PQ \parallel RS$ ಆದರೆ, $\Delta POQ \sim \Delta SOR$ ಎಂದು ಸಾಧಿಸಿ.** March-2019

**ಉತ್ತರ :** $\Delta POQ$ ಮತ್ತು $\Delta SOR$ ಗಳಲ್ಲಿ

$\angle POQ = \angle SOR$ (∵ ಶೃಂಗಾಭಿಮುಖ ಕೋನಗಳು )

$\angle PQO = \angle SRO$ (∵ $PQ \parallel RS$ ಪರ್ಯಾಯ ಕೋನಗಳು )

∴ $\Delta POQ \sim \Delta SOR$ (∵ಕೋನ– ಕೋನ ನಿರ್ಧಾರಕ ಗುಣ)




**2) $\Delta ABC$ ಯಲ್ಲಿ $DE \parallel BC$ , $AD$ = 5ಸೆಂ.ಮೀ., $BD$ = 7ಸೆಂ.ಮೀ. ಮತ್ತು $AC$ = 18ಸೆಂ.ಮೀ. ಆದರೆ, $AE$ ಯನ್ನು ಕಂಡುಹಿಡಿಯಿರಿ.** March : 2019

**ಉತ್ತರ :** $\frac{AD}{AB} = \frac{AE}{AC}$ ( ಸಮರೂಪತೆಯ ಪ್ರಮೇಯ)

$\frac{5}{12} = \frac{AE}{18}$

$AE = \frac{18x5}{12}$

**AE = 7.5 ಸೆಂ.ಮೀ.**




**3) ಚಿತ್ರದಲ್ಲಿ $XY \parallel BC$ , $AX$ = P-3., BX = 2P-2 ಮತ್ತು $\frac{AY}{CY} = \frac{1}{4}$ ಆದರೆ, Pಯನ್ನು ಕಂಡುಹಿಡಿಯಿರಿ.**

**ಉತ್ತರ :** MODEL-2

ಥೇಲ್ಸ್ ಪ್ರಮೇಯದ ಪ್ರಕಾರ,

$\frac{AX}{BX} = \frac{AY}{CY}$

$\frac{P-3}{2p-2} = \frac{1}{4}$

$4(P-3) = 2P-2$

$4P - 12 = 2P - 2$

$4P - 2P = 12 - 2$

$2P = 10$

∴ **P = 5**




**4) ಚಿತ್ರದಲ್ಲಿ $PC \parallel QK$ . ಮತ್ತು $BC \parallel HK$ ಆಗಿದೆ. $AQ$ = 6cm, QH = 4cm, HP = 5cm, ಮತ್ತು $KC$ = 18cm, ಆದರೆ, AK ಮತ್ತು AB ಯನ್ನು ಕಂಡುಹಿಡಿಯಿರಿ.** MODEL-2019

**ಉತ್ತರ :** $\Delta APC$ ಯಲ್ಲಿ, $PC \parallel QK$

ಥೇಲ್ಸ್ ಪ್ರಮೇಯದ ಪ್ರಕಾರ,

$\frac{AQ}{QP} = \frac{AK}{CK}$

$\frac{6}{9} = \frac{AK}{18}$ (∵ QH+HP = QP = 9)

9x AK = 18x6






$AK = \frac{18x6}{9}$

∴ **AK = 12 cm**

$\Delta ABC$ ಯಲ್ಲಿ, $BC \parallel HK$

ಥೇಲ್ಸ್ ಪ್ರಮೇಯದ ಪ್ರಕಾರ,

$\frac{AH}{BH} = \frac{AK}{CK}$

$\frac{10}{BH} = \frac{12}{18}$ (∵ QH+HP = QP = 9)

12x BH = 18x10

$BH = \frac{18x}{12}$

∴ BH = 15 cm

∴ AB = AH + BH = 10+15

∴ **AB = 25cm**

**5) ABC ತ್ರಿಭುಜದಲ್ಲಿ $PQ \parallel BC$ ಮತ್ತು BD = DC ಆಗಿದೆ. PE = EQ ಎಂದು ಸಾಧಿಸಿ.** Prep : 2020

**ಉತ್ತರ :** ΔABD ಯಲ್ಲಿ,

ಥೇಲ್ಸ್ ಉಪಪ್ರಮೇಯದ ಪ್ರಕಾರ

$\frac{AP}{BP} = \frac{AE}{DE} = \frac{PE}{BD}$ -------- (1)

ΔADC ಯಲ್ಲಿ, ಥೇಲ್ಸ್ ಉಪಪ್ರಮೇಯದ ಪ್ರಕಾರ

$\frac{AQ}{QC} = \frac{AE}{DE} = \frac{EQ}{CD}$ -------- (2)

ಸಮೀಕರಣ (1) ಮತ್ತು (2) ರಿಂದ

$\frac{PE}{BD} = \frac{EQ}{CD}$

$PE \times \cancel{CD} = EQ \times \cancel{BD}$ [ ∵ BD = DC ]

∴ **PE = EQ**




**6) $\Delta PQR$ ನಲ್ಲಿ $E$ ಮತ್ತು $F$ ಗಳು ಕ್ರಮವಾಗಿ $PQ$ ಮತ್ತು $PR$ ಗಳ ಮೇಲಿನ ಬಿಂದುಗಳು. $PE$ = 1 ಸೆಂ.ಮೀ., $QE$ = 2 ಸೆಂ.ಮೀ., $PF$ = 3 ಸೆಂ.ಮೀ., ಮತ್ತು $RF$ = 6 ಸೆಂ.ಮೀ. ಆದರೆ $EF \parallel PQ$ ಎಂದು ತೋರಿಸಿ.**

**ಉತ್ತರ :** $\Delta PQR$ ನಲ್ಲಿ

$\frac{PE}{EQ} = \frac{1}{2}$

$\frac{PF}{FR} = \frac{3}{6} = \frac{1}{2}$

$\frac{PE}{EQ} = \frac{PF}{FR} = \frac{1}{2}$

∴ **$EF \parallel PQ$** (∵ ಥೇಲ್ಸ್ ವಿಲೋಮ ಪ್ರಮೇಯ )






Use E-Papers, Save Tress
Above line hide when print out

**7) ಪಕ್ಕದಲ್ಲಿ ಕೊಟ್ಟಿರುವ ಚಿತ್ರದಲ್ಲಿ DE∥AC ಮತ್ತು DF∥AE** PREP-2019

**ಆದರೆ $\frac{BF}{FE} = \frac{BE}{EC}$ ಎಂದು ಸಾಧಿಸಿ.**




**ಉತ್ತರ :** ΔABC ಯಲ್ಲಿ, DE ∥ AC ( ∵ ದತ್ತ )

ಥೇಲ್ಸ್ ಪ್ರಮೇಯದ ಪ್ರಕಾರ,

$\frac{BD}{DA} = \frac{BE}{EC}$ ---------(1)

ΔABE ಯಲ್ಲಿ, DF ∥ AE ( ∵ ದತ್ತ )

ಥೇಲ್ಸ್ ಪ್ರಮೇಯದ ಪ್ರಕಾರ,

$\frac{BD}{DA} = \frac{BF}{FE}$ ---------(2)

ಸಮೀಕರಣ (1) ಮತ್ತು (2) ರಿಂದ

$\frac{BF}{FE} = \frac{BE}{EC}$ (∵ ಸ್ವಯಂ ಸಿದ್ಧ )

**8) ಕೊಟ್ಟಿರುವ ಚಿತ್ರದಲ್ಲಿ $LM \parallel AB$, $AL = x-3$, $AC = 2x$, $BM = x-2$**

**ಮತ್ತು $BC = 2x+3$ ಆದರೆ $x$ ನ ಬೆಲೆಯನ್ನು ಕಂಡುಹಿಡಿಯಿರಿ.**




**ಉತ್ತರ :** ಥೇಲ್ಸ್ ಉಪ ಪ್ರಮೇಯದ ಪ್ರಕಾರ

$\frac{CL}{CA} = \frac{CM}{CB}$

$\frac{CA-AL}{CA} = \frac{CB-BM}{CB}$

$\frac{2x-x+3}{2x} = \frac{2x+3-x+2}{2x+3}$

$\frac{x+3}{2x} = \frac{x+5}{2x+3}$

$2x(x+5) = (x+3)(2x+3)$

$2x^2 + 10x = 2x^2 + 3x + 6x + 9$

$10x = 9x + 9$

$10x - 9x = 9$

$x = 9$

**9) ಚಿತ್ರದಲ್ಲಿ ತೋರಿಸಿರುವಂತೆ $ABCD$ ಒಂದು ಸಮಾಂತರ ಚತುರ್ಭುಜ. $BC$ ಯ ಮೇಲೆ $'E'$ ಒಂದು ಬಿಂದು, ಕರ್ಣ $BD$ ಯು $AE$ ಯನ್ನು $'F'$ನಲ್ಲಿ ಛೇದಿಸುತ್ತದೆ. ಹಾಗಾದರೆ $DF \times EF = FB \times FA$ ಎಂದು ಸಾಧಿಸಿ.**

June : 2019 & State-Prep : 2020




**ಉತ್ತರ :** ΔADF ಮತ್ತು ΔEBF ಗಳಲ್ಲಿ

∠ADF = ∠BEF ( ∵ AD ∥ BE, ಪರ್ಯಾಯ ಕೋನಗಳು )

∠AFD = ∠BFE ( ∵ ಶೃಂಗಾಭಿಮುಖ ಕೋನಗಳು )



ΔADF ~ ΔEBF ( ∵ ಕೋನ–ಕೋನ ನಿರ್ಧಾರಕ ಗುಣ )

$\frac{DF}{FB} = \frac{FA}{EF}$ ⇨ $DF \times EF = FB \times FA$

**10) ಎರಡು ಸಮರೂಪ ತ್ರಿಭುಜಗಳ ಸುತ್ತಳತೆಯು 25cm ಮತ್ತು 15cm ಗಳಾಗಿವೆ. ಮೊದಲನೆಯ ತ್ರಿಭುಜದ ಒಂದು ಬಾಹುವಿನ ಅಳತೆಯು 9 cm ಆದರೆ, ಮತ್ತೊಂದು ತ್ರಿಭುಜದ ಅನುರೂಪ ಬಾಹುವಿನ ಅಳತೆಯನ್ನು ಕಂಡುಹಿಡಿಯಿರಿ.** MODEL-1

**ಉತ್ತರ :** ಎರಡು ಸಮರೂಪ ತ್ರಿಭುಜಗಳ ಸುತ್ತಳತೆಗಳ ಅನುಪಾತವು ಅವುಗಳ ಅನುರೂಪ ಬಾಹುಗಳ ಅನುಪಾತಕ್ಕೆ ಸಮವಾಗಿರುತ್ತವೆ.

$\frac{\Delta ABC \text{ ಸುತ್ತಳತೆ}}{\Delta PQR \text{ ಸುತ್ತಳತೆ}} = \frac{AB}{PQ}$

$\frac{25}{15} = \frac{9}{PQ}$

$PQ = \frac{15X9}{25}$

**PQ = 5.4 cm**

**11) ಚಿತ್ರದಲ್ಲಿ $\Delta ABC$ ಮತ್ತು $\Delta DBC$ ಒಂದೇ ಪಾದ BCಯ ಮೇಲೆ ಇವೆ. AD ಯು BCಯನ್ನು 'O' ನಲ್ಲಿ ಛೇದಿಸುತ್ತದೆ. AL ⊥ BC ಮತ್ತು DM ⊥ BC ಆದಾಗ $\frac{\text{ವಿ } \Delta ABC}{\text{ವಿ } \Delta DBC} = \frac{AO}{DO}$ ಎಂದು ಸಾಧಿಸಿ.** MODEL-2020

**ಉತ್ತರ :** ತ್ರಿಭುಜದ ವಿಸ್ತೀರ್ಣ = $\frac{1}{2}$ x ಪಾದ x ಎತ್ತರ




$\frac{\text{ವಿ } \Delta ABC}{\text{ವಿ } \Delta DBC} = \frac{\frac{1}{2} x BC x AL}{\frac{1}{2} x BC x DM}$

$\frac{\text{ವಿ } \Delta ABC}{\text{ವಿ } \Delta DBC} = \frac{AL}{DM}$ --------- (1)

ΔALO ಮತ್ತು ΔDMO ಗಳಲ್ಲಿ

∠AOL = ∠DOM (∵ ಶೃಂಗಾಭಿಮುಖ ಕೋನಗಳು)

∠ALO = ∠DMO = $90^0$ (∵ ದತ್ತ )

∴ **ΔALO ~ ΔDMO** (∵ ಕೋನ– ಕೋನ ನಿರ್ಧಾರಕ ಗುಣ )

∴ $\frac{AL}{DM} = \frac{AO}{DO}$ ------- (2) (∵ ಕೋನ– ಕೋನ ನಿರ್ಧಾರಕ ಪ್ರಮೇಯ )

ಸಮೀಕರಣ (1) ಮತ್ತು (2) ರಿಂದ

∴ $\frac{\text{ವಿ } \Delta ABC}{\text{ವಿ } \Delta DBC} = \frac{AO}{DO}$

**12) $\Delta ABC$ ಯಲ್ಲಿ ∠ADC = ∠BAC ಆಗುವಂತೆ D ಯು $BC$ ಬಾಹುವಿನ ಮೇಲಿನ ಒಂದು ಬಿಂದುವಾಗಿದೆ. $CA^2 = CB.CD$ ಎಂದು ಸಾಧಿಸಿ.** Prep : 2020




Use E-Papers, Save Tress
Above line hide when print out

ಉತ್ತರ : ΔABC ಮತ್ತು ΔADC ಗಳಲ್ಲಿ,

$\angle BAC = \angle ADC$ (∵ ದತ್ತ )

$\angle C = \angle C$ (∵ ಉಭಯ ಸಾಮಾನ್ಯ)

∴ $\Delta ABC \sim \Delta ADC$ (∵ AA ನಿರ್ಧಾರಕ ಗುಣ)




ಆದ್ದರಿಂದ $\frac{CA}{CD} = \frac{CB}{CA}$

**∴ $CA^2 = CB.\ CD$**

**13) ತ್ರಾಪಿಜ್ಯ ABCDಯಲ್ಲಿ $AB \parallel CD$, AC ಮತ್ತು BD ಕರ್ಣಗಳು ಪರಸ್ಪರ 'O' ಬಿಂದುವಿನಲ್ಲಿ ಛೇದಿಸಿವೆ. AO.OD = BO.OC ಎಂದು ಸಾಧಿಸಿ.** Prep : 2020

ಉತ್ತರ : ΔAOB ಮತ್ತು ΔCOD ಗಳಲ್ಲಿ,

$\angle AOB = \angle COD$ (∵ ಶೃಂಗಾಭಿಮುಖ ಕೋನಗಳು)

$\angle ABO = \angle CDO$ (∵ ಪರ್ಯಾಯ ಕೋನಗಳು)

∴ AOB ~ΔCOD (∵ AA ನಿರ್ಧಾರಕ ಗುಣ)




ಆದ್ದರಿಂದ $\frac{AO}{OC} = \frac{BO}{OD}$

**∴ AO.OD = BO.OC**

**14) " ಒಂದು ತ್ರಾಪಿಜ್ಯದಲ್ಲಿ ಸಮಾಂತರವಲ್ಲದ ಬಾಹುಗಳ ಮಧ್ಯಬಿಂದುಗಳನ್ನು ಸೇರಿಸುವ ರೇಖೆಯು ಸಮಾಂತರ ಬಾಹುಗಳಿಗೆ ಸಮಾಂತರವಾಗಿರುತ್ತದೆ " ಎಂದು ಸಾಧಿಸಿ.**

ಉತ್ತರ : ಸಾಧನೀಯ : $EF \parallel AB$ & $EF \parallel DC$

ಸಾಧನೆ : ABCD ಯು ತ್ರಾಪಿಜ್ಯವಾಗಿದ್ದು ಪಾದ AB ಮತ್ತು DC ಮತ್ತು ಮಧ್ಯರೇಖೆ EF ಆಗಿರಲಿ.

ಈಗ, DF ರೇಖೆಯನ್ನು D ಮತ್ತು F ಬಿಂದುಗಳ ಮೂಲಕ AB ಸರಳರೇಖೆಯನ್ನು G ಬಿಂದುವಿನಲ್ಲಿ ಛೇದಿಸುವಂತೆ ವೃದ್ಧಿಸಿದೆ.

Δ DFC ಮತ್ತು Δ FBG ಯಲ್ಲಿ,

CF = FB ( ∵ BC ಮಧ್ಯಬಿಂದು F )

$\angle DFC = \angle GFB$ (∵ ಶೃಂಗಾಭಿಮುಖ ಕೋನಗಳು )

$\angle DCF = \angle GBF$ (∵ ಪರ್ಯಾಯ ಕೋನಗಳು )

$\Delta DFC \cong \Delta FBG$ (∵ ಕೋ.ಬಾ.ಕೋ. ಸಿದ್ಧಾಂತ)




∴ DF = GF (∵ ಸರ್ವಸಮ ತ್ರಿಭುಜದ ಅನುರೂಪ ಬಾಹುಗಳು)

∴ F ಬಿಂದುವು DG ಯ ಮಧ್ಯಬಿಂದು.

Δ DAG ಯಲ್ಲಿ $\frac{DE}{AE} = \frac{DF}{FG} = 1$



∴ $EF \parallel AG$ ( ∵ಥೇಲ್ಸ್ ವಿಲೋಮ ಪ್ರಮೇಯ )

**∴ $EF \parallel AB$ & $EF \parallel DC$**

**15) ಕೊಟ್ಟಿರುವ ತ್ರಿಭುಜದಲ್ಲಿ $\angle BAC = 90°$ ಮತ್ತು $AD \perp BC$ ಆಗಿದೆ. $AC^2 = BC.DC$ ಎಂದು ಸಾಧಿಸಿ.**

ಉತ್ತರ : ΔBAC ಮತ್ತು ΔADC ಗಳಲ್ಲಿ

$\angle BAC = \angle ADC = 90^0$ ( ∵ ದತ್ತ )

$\angle BCA = \angle DCA$ ( ∵ ಉಭಯ ಸಾಮಾನ್ಯ ಕೋನಗಳು )

∴ $\Delta BAC \approx \Delta ADC$ ( ∵ ಕೋನ–ಕೋನ ನಿರ್ಧಾರಕ ಗುಣ )




∴ $\frac{BC}{AC} = \frac{AC}{DC}$ ⟹ $AC^2 = BC.DC$

**16) ಕೊಟ್ಟಿರುವ ಚಿತ್ರದಲ್ಲಿ ΔABC ಮತ್ತು ΔAMP ಗಳು ಕ್ರಮವಾಗಿ B ಮತ್ತು M ಗಳಲ್ಲಿ ಲಂಬಕೋನ ಗಳನ್ನು ಹೊಂದಿರುವ ಲಂಬಕೋನ ತ್ರಿಭುಜಗಳು. ಆದರೆ i) ΔABC ~ ΔAMP ಮತ್ತು $\frac{CA}{PA} = \frac{BC}{MP}$ ಎಂದು ಸಾಧಿಸಿ.** PREP-2019




ಉತ್ತರ : (1) ΔABC ಮತ್ತು ΔAMP ಗಳಲ್ಲಿ,

$\angle A = \angle A$ (∵ ಸಾಮಾನ್ಯ ಕೋನಗಳು)

$\angle ABC = \angle AMP = 90^0$

∴ ΔABC ~ΔAMP (∵ AA ನಿರ್ಧಾರಕ ಗುಣ)

(2) ΔABC ~ ΔAMP

ಸಮರೂಪ ತ್ರಿಭುಜಗಳ ಅನುರೂಪ ಬಾಹುಗಳ ಅನುಪಾತಗಳು ಸಮ,

**∴ $\frac{CA}{PA} = \frac{BC}{MP}$**

**17) ΔABC~ΔDEF ಮತ್ತು ಅವುಗಳ ವಿಸ್ತೀರ್ಣಗಳು ಕ್ರಮವಾಗಿ $64cm^2$ ಮತ್ತು $121cm^2$ ಗಳಾಗಿದ್ದು EF = 15.4 cm ಆದರೆ BC ಯ ಉದ್ದವನ್ನು ಕಂಡುಹಿಡಿಯಿರಿ.**

ಉತ್ತರ :




$$\frac{ವಿ(\Delta ABC)}{ವಿ(\Delta DEF)} = \frac{BC^2}{EF^2}$$

$$\frac{64}{121} = \frac{BC^2}{15.4^2}$$

$$BC^2 = \frac{64x15.4^2}{121}$$

$$BC = \sqrt{\frac{64x\ \ .4^2}{121}} = \frac{8x15.4}{11} = \frac{123.2}{11}$$

**BC = 11.2 ಸೆಂ.ಮೀ**



Use E-Papers, Save Tress
Above line hide when print out

**18) $\Delta ABC \sim \Delta DEF$ ಮತ್ತು ಅವುಗಳ ವಿಸ್ತೀರ್ಣಗಳು ಕ್ರಮವಾಗಿ 64 ಚದರ ಸೆಂ.ಮೀ ಮತ್ತು 100 ಚದರ ಸೆಂ.ಮೀ.ಗಳಾಗಿದ್ದು, $EF = 12$ ಸೆಂ.ಮೀ. ಆದಾಗ $BC$ ಯ ಅಳತೆಯನ್ನು ಕಂಡುಹಿಡಿಯಿರಿ.**

June : 2019




**ಉತ್ತರ :** $\frac{\text{ವಿ}\Delta ABC}{\text{ವಿ}\Delta DEF} = \frac{BC^2}{EF^2}$

$\frac{64}{100} = \frac{BC^2}{12^2}$

$BC^2 = \frac{64 x 144}{100}$

